


ಕಲ್ಯಾಣ ಕಿರಣ

ಫೆಬ್ರವರಿ 2003

ಬೆಲೆ ರೂ. 5-00







ದಿ. 14-1-2003, ಬಸವ ಧರ್ಮ ಸಂಸ್ಥಾಪನಾ ದಿನದಂದು
ಸಮುದಾಯ ಪ್ರಾರ್ಥನೆ

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 32 | ಬಸವ ಶಕೆ 869 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -2 | ಫೆಬ್ರವರಿ 2003 | ವಾರ್ಷಿಕ ಚಂದಾ 50/- ರೂ

ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿವಿಡಿದು ಬೆಳಗಿತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಬೆಳಕನು ತರುವಾ ಕಲ್ಯಾಣಕೆ ॥4॥

ವಿಶ್ವಕಾಯಕದ ದಿನ ನಡೆಯುತಿದೆ ಕಲ್ಯಾಣ ಪರ್ವ
ನಾಡ ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ, ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಛಲವ ತೊಟ್ಟು ಕಟ್ಟುವ ಮತ್ತೆ ನವಕಲ್ಯಾಣ ॥6॥

- ಬಸವಾತ್ಮಜೆ

★ ಕಲ್ಯಾಣ ಕಿರಣ ★

ಸಂಪುಟ 32	ಬಸವ ಶಕೆ 869	ಆಜೀವ ಸದಸ್ಯತ್ವ 500 ರೂ
ಸಂಚಿಕೆ - 2	ಫೆಬ್ರವರಿ 2003	ವಾರ್ಷಿಕ ಚಂದಾ 50 ರೂ

ಲೇಖನಗಳು ಕಿರಣಗನ್ನಡಿ

ಗಣ ಮೇಳಕ್ಕೆ ಕರೆ

1. ಫೆಬ್ರವರಿ 16 ರಂದು ಮಾಘ ಪೌರ್ಣಿಮೆ. ಚನ್ನ ಹುಣ್ಣಿಮೆಯ ದಿನ ಬೆಳದಿಂಗಳ ಊಟ ಏರ್ಪಡಿಸಿ, ಸಂಜೆ ಚನ್ನಬಸವಣ್ಣನವರ ಸಂಸ್ಮರಣೆ ಮಾಡಿ, ನಂತರ ಬೆಳದಿಂಗಳ ಊಟ ಮಾಡಬೇಕು.
2. ಮಾರ್ಚ್ 1 ರಂದು ಶಿವರಾತ್ರಿ. ವಿಶಾಲವಾದ ಮೈದಾನದಲ್ಲಿ ಗಣ ಮೇಳ ಏರ್ಪಡಿಸಿ, ಬೆಳಿಗ್ಗೆ ಪಥ ಸಂಚಲನ, ಸಾಮೂಹಿಕ ಪ್ರಾರ್ಥನೆ ಮಾಡಿ ಸಂದೇಶ ವಾಚನ ಮಾಡಬೇಕು. ಗಣಮೇಳದ ಸಂದೇಶವನ್ನು ಜನವರಿಯ ಕಲ್ಯಾಣ ಕಿರಣದಲ್ಲಿ ಮುದ್ರಿಸಲಾಗಿರುವ ಕಾರಣ ಈ ಸಂಚಿಕೆಯಲ್ಲಿ ಮುದ್ರಿಸಿಲ್ಲ.
3. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು 1-3-2003 ರಂದು ಧಾರವಾಡ ನಗರದ ಕಡಪಾ ಮೈದಾನ (ಕಲಾ ಭವನ) ದಲ್ಲಿ ಗಣಮೇಳದ ಸನ್ನಿಧಿ ವಹಿಸುವರು. ಸಂಜೆ 5-30 ರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ದೀಕ್ಷಾ ಕಾರ್ಯಕ್ರಮ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ನಡೆಯುತ್ತವೆ.

★ ಕಲ್ಯಾಣ ಕಿರಣದ ವಿಶೇಷ ಸಂಚಿಕೆಯ ಬೆಲೆ : 10 ರೂ. ★

ಕಲ್ಯಾಣ ಕಿರಣ ಮಾಸ ಪತ್ರಿಕೆಯ ಪುಟಗಳು 80, ಭಾವಚಿತ್ರಗಳೂ ಬಹಳ ಇವೆ. ಬಹು ವರ್ಣೀಯ ಹೊದ್ದಿಕೆ ಇದೆ. ಆದ್ದರಿಂದ ಈ ಸಂಚಿಕೆಯ ಬೆಲೆ : 10 ರೂ. ಇದೆ. ಮುಖ ಪುಟ ಮೊದಲೇ ಮುದ್ರಣಗೊಂಡಿದ್ದರಿಂದ 5 ರೂ. ಎಂದು ಮುದ್ರಿಸಲಾಗಿದ್ದರೂ ಮೇಲೆ ತಿಳಿಸಿದ ಕಾರಣಗಳಿಂದ 10 ರೂ. ಇಡಲಾಗಿದೆ. ಸಹಕರಿಸಬೇಕು. - ಸಂಪಾದಕರು

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಮುಂಬರುವ ದಿನಗಳಲ್ಲಿ ಒದಗುವ ಹಬ್ಬ-ಹುಣ್ಣಿಮೆ-ಉತ್ಸವಗಳು

1. ದಿ.16-2-2003 ಚನ್ನಹುಣ್ಣಿಮೆ. ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆ ಉಳವಿಯಲ್ಲಿ ರಥೋತ್ಸವ - ಚನ್ನಹುಣ್ಣಿಮೆಯ ನಿಮಿತ್ತ ಬೆಳದಿಂಗಳಲ್ಲಿ ಊಟ.
2. ದಿ.1-3-2003 ಮಹಾಶಿವರಾತ್ರಿ, ಗಣ ಮೇಳ. ಸಾಮೂಹಿಕ ಪ್ರಾರ್ಥನೆ, ಸಂದೇಶವಾಚನ - ಬೆಳಿಗ್ಗೆ 10-30 ಕ್ಕೆ.
3. ದಿ.13-3-2003 ಪೂಜ್ಯ ಮಾತಾಜಿಯವರ 57ನೆಯ ವರ್ಧಂತಿ
4. ದಿ.14-3-2003 ರಿಂದ 19-3-2003ರ ವರೆಗೆ ಕಲ್ಯಾಣ ಕ್ರಾಂತಿಯ ಸಂಸ್ಮರಣೆ.
5. ದಿ.2-4-2003 ಅಲ್ಲಮ ಪ್ರಭು ಜಯಂತಿ
6. ದಿ.16-4-2003 ಅಕ್ಕಮಹಾದೇವಿ ಜಯಂತಿ
7. ದಿ.30-4-2003, 1-5-03 ಮತ್ತು 2-5-03 ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ.
8. ದಿ.1-5-2003 ಮಡಿವಾಳ ಮಾಚಿದೇವ ಜಯಂತಿ
9. ದಿ.4-5-2003 ಬಸವ ಜಯಂತಿ.

ಶರಣ ವ್ರತ ಸ್ವೀಕಾರ

ಶರಣ ವ್ರತ ಸ್ವೀಕಾರದಿಂದ ಒಂದು ಶಿಸ್ತು ಬರುವುದೆಂಬ ಉದ್ದೇಶದಿಂದ ಅನೇಕ ಶರಣಬಂಧುಗಳ ಕೋರಿಕೆಯ ಮೇರೆಗೆ ಕಲ್ಯಾಣ ಪರ್ವಕ್ಕೆ ಮುನ್ನ ಶರಣ ವ್ರತಾಚರಣೆಗೆ ಅನುಮತಿ ನೀಡಲಾಗುತ್ತಿದೆ.

1. ಗುರು ಸಾರಾಯ ಸಂಪದ್‌ವ್ರತ : 40 ದಿವಸ : ಪ್ರಾರಂಭ 22-3-2003
2. ಲಿಂಗ ಸಾರಾಯ ಸಂಪದ್‌ವ್ರತ : 30 ದಿವಸ : ಪ್ರಾರಂಭ 1-4-2003
3. ಜಂಗಮ ಸಾರಾಯ ಸಂಪದ್‌ವ್ರತ : 20 ದಿವಸ: ಪ್ರಾರಂಭ 11-4-2003
4. ಪ್ರಸಾದ ಸಾರಾಯ ಸಂಪದ್‌ವ್ರತ : 10 ದಿವಸ : ಪ್ರಾರಂಭ 21-4-2003

ದಿ. 1-5-2003 ರಂದು ಬಸವ ಕಲ್ಯಾಣದಲ್ಲಿ ಸಮುದಾಯ ಪ್ರಾರ್ಥನೆ ಮಾಡಿ ಮತ್ತು ಶರಣರಿಗೆ ಶರಣಾರ್ಥಿ ಸಲ್ಲಿಸಿದ ನಂತರ ಶರಣ ವ್ರತವು ಮುಕ್ತಾಯಗೊಳ್ಳುವುದು. ಶರಣ ಬಂಧುಗಳು ಶರಣ ಮೇಳ ಮತ್ತು ಕಲ್ಯಾಣ ಪರ್ವ ಎರಡೂ ಸಮಯದಲ್ಲಿ ವ್ರತ ಸ್ವೀಕರಿಸಬಹುದು ಅಥವಾ ಎರಡರಲ್ಲಿ ಒಂದು ಬಾರಿ ಅನುಕೂಲವಾದಂತೆ ವ್ರತ ಸ್ವೀಕರಿಸಬಹುದು.

ವಿಶೇಷ ಸೂಚನೆ : ಶರಣ ಮೇಳದ ಭಾವಚಿತ್ರಗಳ ಮುದ್ರಣದಿಂದಾಗಿ ಸ್ಥಳಾಭಾವವಾಗಿರುವುದರಿಂದಲೂ ಮತ್ತು ದಾನಿಗಳ ಪಟ್ಟಿಯೂ ಕ್ರೋಢೀಕರಣಗೊಂಡಿಲ್ಲವಾದ್ದರಿಂದ ಈ ಸಲ ದಾಸೋಹಿಗಳ ಪಟ್ಟಿಯನ್ನು ಮುದ್ರಿಸಲಾಗಿಲ್ಲ.

ಲಿಂಗದೇವಾಷ್ಟಕ

1. ಶರಣ ಜನ ಪೂಜಿತ ಶ್ರೀ ಲಿಂಗದೇವ
ಮರಣ ಭಯದೂರಕ ಶ್ರೀ ಲಿಂಗದೇವ
ಸೃಷ್ಟಿಕರ್ತ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

2. ಸರ್ವಕಾರಣ ಶ್ರೀ ಲಿಂಗದೇವ
ಸರ್ವಶಕ್ತ ಶ್ರೀ ಲಿಂಗದೇವ
ಸರ್ವವ್ಯಾಪಿ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

3. ನಿರಾಕಾರ ನಿರ್ಗುಣ ಶ್ರೀ ಲಿಂಗದೇವ
ನಿರ್ಮಲ ಚೇತನ ಶ್ರೀ ಲಿಂಗದೇವ
ಪ್ರಣವ ಸ್ವರೂಪ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

4. ವಿಶ್ವತಃ ಚಕ್ಷು ಶ್ರೀ ಲಿಂಗದೇವ
ವಿಶ್ವತೋಬಾಹು ಶ್ರೀ ಲಿಂಗದೇವ
ವಿಶ್ವತಃಪಾದ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

5. ಮಾತಾಪಿತ ರಹಿತ ಶ್ರೀ ಲಿಂಗದೇವ
ಜಗದಾರಾಧ್ಯ ಶ್ರೀ ಲಿಂಗದೇವ
ಲೋಕ ರಕ್ಷಕ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

6. ಜ್ಯೋತಿ ಸ್ವರೂಪ ಶ್ರೀ ಲಿಂಗದೇವ
ಕಾರುಣ್ಯ ನಿಧಿ ಶ್ರೀ ಲಿಂಗದೇವ
ಮಂಗಳರೂಪಿ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

7. ಜನನ ಮರಣ ರಹಿತ ಶ್ರೀ ಲಿಂಗದೇವ
ಭವತಾಪ ಹಾರಕ ಶ್ರೀ ಲಿಂಗದೇವ
ಮುಕ್ತಿದಾತ ಶ್ರೀ ಲಿಂಗದೇವ
ವಂದಿಪೆ ನಾ ಘನ ಲಿಂಗದೇವ

8. ಹೃತ್ಕಮಲವಾಸಿ ಶ್ರೀ ಲಿಂಗದೇವ
ಗುರು ಬಸವ ರೂಪಿತ ಶ್ರೀ ಲಿಂಗದೇವ
ಇಷ್ಟಲಿಂಗರೂಪಿ ಶ್ರೀ ಲಿಂಗದೇವ
ಪೂಜಿಪೆ ನಾ ಘನ ಲಿಂಗದೇವ

ರಚನೆ : ಪೂಜ್ಯ ಮಾತಾಜಿ

ಗುರು ಬಸವಾಷ್ಟಕ

1. ಶರಣ ಗಣ ಪೂಜಿತ ಶ್ರೀ ಗುರು ಬಸವ
ಮರಣ ಭಯದೂರಕ ಶ್ರೀ ಗುರು ಬಸವ
ಮುಕ್ತಿದಾಯಕ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

2. ಪರಮ ಕಾರಣಿಕ ಶ್ರೀ ಗುರು ಬಸವ
ದಾರ್ಶನಿಕ ದಿಗ್ಗಜ ಶ್ರೀ ಗುರು ಬಸವ
ಭಕ್ತಿಯೋಗಿ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

3. ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಲಿಂಗಾಂಗ ಯೋಗಿ ಶ್ರೀ ಗುರು ಬಸವ
ಶರಣ ಸಾರ್ವಭೌಮ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

4. ಕಾಯಕ ಯೋಗಿ ಶ್ರೀ ಗುರು ಬಸವ
ಅಹಿಂಸಾವಾದಿ ಶ್ರೀ ಗುರು ಬಸವ
ಜಂಗಮಮೂರ್ತಿ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

5. ಅಷ್ಟಾವರಣ ಶೋಭಿತ ಶ್ರೀ ಗುರು ಬಸವ
ಪಂಚಾಚಾರ ಬೋಧಕ ಶ್ರೀ ಗುರು ಬಸವ
ಷಟಸ್ಥಲ ಸಾಧಕ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

6. ಸಮತಾವಾದಿ ಶ್ರೀ ಗುರು ಬಸವ
ಮಾನವತಾವಾದಿ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

7. ಕ್ರಾಂತಿ ಪುರುಷ ಶ್ರೀ ಗುರು ಬಸವ
ಶಾಂತಿ ದೂತ ಶ್ರೀ ಗುರು ಬಸವ
ಮನುಕುಲೋದ್ಧಾರಿ ಶ್ರೀ ಗುರು ಬಸವ
ವಂದಿಪೆ ನಾ ಓಂ ಗುರು ಬಸವ

8. ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗ ಯೋಗಿ ಶ್ರೀ ಗುರು ಬಸವ
ಇಚ್ಛಾಮರಣಿ ಶ್ರೀ ಗುರು ಬಸವ
ಪೂಜಿಪೆ ನಾ ಓಂ ಗುರು ಬಸವ

ರಚನೆ : ಪೂಜ್ಯ ಅಲ್ಲಮ ಪ್ರಭು ಸ್ವಾಮೀಜಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666



ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಕಾಯಕದ ದಿನದ ಅಂಗವಾಗಿ ಎರಡನೆಯ



ಗಣ ಧ್ವಜ

ಕಲ್ಯಾಣ ಪರ್ವ

2003ರ ಏಪ್ರಿಲ್ 30, ಮೇ 1 ಮತ್ತು 2 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 16ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

''ಕಪಿಲಸಿದ್ಧಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು''

ಎಂದು ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ. 1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ'' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ

ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಇಂಥ ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು 2003 ರ ಏಪ್ರಿಲ್ 30, ಮೇ 1 ಮತ್ತು 2 ರಂದು 'ಕಲ್ಯಾಣ ಪರ್ವ'ವನ್ನು ನಡೆಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು.'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 29ರ ರಾತ್ರಿಯಿಂದ ಮೇ 3ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು	4. ಹಿತೈಷಿಗಳು : 500 ರೂ
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು	5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು	6. ಪ್ರತಿನಿಧಿ ಶುಲ್ಕ : 100 ರೂ.

ಅನ್ನದಾಸೋಹಕ್ಕಾಗಿ ದವಸ-ಧಾನ್ಯಗಳನ್ನು ಮತ್ತು ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜ್ಯೋತಿ ಯಾತ್ರೆಯ ಯೋಜನೆ

ಶರಣ ಬಂಧುಗಳೆ, ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅತ್ಯಂತ ನೋವಿನ ಪ್ರಸಂಗ ಕಲ್ಯಾಣ ಕ್ರಾಂತಿ. ಜಾತಿವರ್ಣವರ್ಗರಹಿತ ಧರ್ಮ ಸಹಿತ ಶರಣ ಸಮಾಜವನ್ನು ಕಟ್ಟಬಯಸುವ ಪ್ರಯತ್ನಕ್ಕೆ ಪೋಷಕವಾಗಿ, ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣ ಧರ್ಮ ಸ್ವೀಕರಿಸಿದ ಶರಣ ಮಧುವರಸರ ಮಗಳು ಲಾವಣ್ಯವತಿಯನ್ನು, ಹುಟ್ಟಿನಿಂದ ಸಮಗಾರರಾಗಿ ಶರಣ ಧರ್ಮ ಸ್ವೀಕರಿಸಿದ ಹರಳಯ್ಯನವರ ಮಗ ಶೀಲವಂತನಿಗೆ ವಿವಾಹ ಮಾಡಿಕೊಡಲು ಧರ್ಮಪಿತ ಬಸವಣ್ಣನವರು ಪ್ರೋತ್ಸಾಹ ನೀಡಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳರಾಜನನ್ನು ಪ್ರಚೋದಿಸಿ ಧರ್ಮಪಿತರನ್ನು ಗಡಿಪಾರು ಮಾಡಿಸಿದರು. ಧರ್ಮಗುರುವಿನ ನಿರ್ಗಮನಾನಂತರ ಹರಳಯ್ಯ-ಮಧುವರಸ-ಶೀಲವಂತರ ಕಣ್ಣು ಕೀಳಿಸಿ

ಆನೆ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ಕೊಲ್ಲಿಸಲಾಯಿತು. ಅಸಂಖ್ಯಾತ ಶರಣರು ರಚಿಸಿದ ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನವಾಗಿದ್ದ ವಚನ ವಾಙ್ಮಯವನ್ನು ನಾಶಮಾಡಲು ಸಂಪ್ರದಾಯವಾದಿಗಳು ಯತ್ನಿಸಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಾಯಕತ್ವ ವಹಿಸಿ ವಚನ ಸಾಹಿತ್ಯವನ್ನು ಕಲ್ಯಾಣದಿಂದ ಹೊರಗೆ ಸಾಗಿಸಿದ್ದಲ್ಲದೆ ಬೆನ್ನು ಹತ್ತಿ ಬಂದ ಸೈನ್ಯದೊಡನೆ ಕಾದಿ ವಚನ ಸಾಹಿತ್ಯವನ್ನು ಸಹ್ಯಾದ್ರಿಯ ಬೆಟ್ಟಗಳ ಗರ್ಭದಲ್ಲಿದ್ದ ಗುಹೆಗಳಲ್ಲಿ ಇಟ್ಟು ಸಂರಕ್ಷಿಸಿದರು. ಆದಿ ಶರಣರ ಆ ಋಣವನ್ನು ತೀರಿಸಲು ಎಷ್ಟು ಜನ್ಮಗಳ ಕಾಲ ದುಡಿದರೂ ಸಾಲದು. ಕಲ್ಯಾಣದಿಂದ ಹೊರಟು ಧರ್ಮಪಿತರು ಕೂಡಲ ಸಂಗಮಕ್ಕೆ ಹೋದರೆ ಮಾಚಿದೇವರು ಸಹ್ಯಾದ್ರಿಯತ್ತ ಸಾಗಿದರು. ಕಲ್ಯಾಣದಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮತ್ತು ವೀರಮಾತೆ ಅಕ್ಕನಾಗಲಾಂಬಿಕೆ ಸೊನ್ನಲಾಪುರಕ್ಕೆ ತೆರಳಿ ಶೂನ್ಯ ಪೀಠದ ಅಧಿಕಾರವನ್ನು ವಹಿಸಿಕೊಟ್ಟು ಧರ್ಮ ವಿಸ್ತರಣೆಯ ಹೊಣೆಯನ್ನು ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಹಸ್ತಾಂತರಿಸಿ ತಾವೂ ಸಹ್ಯಾದ್ರಿಯತ್ತ ಸಾಗಿದರು. ಜಗನ್ಮಾತಾ ಅಕ್ಕಮಹಾದೇವಿ, ಶೂನ್ಯ ಪೀಠಾಧೀಶ ಅಲ್ಲಮಪ್ರಭುಗಳು ಕದಳಿಗೆ ಹೋದರು. ನಾಗಲಾಂಬಿಕೆಯ ಗದ್ದುಗೆ ತರೀಕೆರೆಯಲ್ಲಿದೆ. ಹರಳಯ್ಯನವರು ಮಾಡಿದ ಪಾದುಕೆಗಳು ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ ಗ್ರಾಮದಲ್ಲಿವೆ. ಆದ್ದರಿಂದ 2002 ನೆಯ ಇಸವಿಯಲ್ಲಿ ಕೂಡಲಸಂಗಮ, ಉಳಿವೆ, ಬಳ್ಳಿಗಾವಿ, ಕದಳಿ, ಬಿಜನಳ್ಳಿ ಮತ್ತು ಸೊನ್ನಲಾಪುರ (ಸೊಲ್ಲಾಪುರ) ದಿಂದ ಆರು ಜ್ಯೋತಿ ಯಾತ್ರೆಗಳನ್ನು ನಿಯೋಜಿಸಿ ಬಸವ ಜ್ಯೋತಿ, ಚನ್ನಬಸವ ಜ್ಯೋತಿ, ಅಲ್ಲಮಪ್ರಭು ಜ್ಯೋತಿ, ಅಕ್ಕ ಮಹಾದೇವಿ ಜ್ಯೋತಿ, ಹರಳಯ್ಯ ಜ್ಯೋತಿ ಮತ್ತು ಸಿದ್ಧರಾಮ ಜ್ಯೋತಿಗಳನ್ನು ಆ ಸ್ಥಳಗಳಿಂದ ತಂದು ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಸದಾ ಕಾಲವೂ ಉರಿಯುವಂತೆ ಕಲ್ಯಾಣ ಜ್ಯೋತಿಯನ್ನು ಹೊತ್ತಿಸಲಾಯಿತು. ಅದೇ ರೀತಿ ಎರಡನೆಯ ಕಲ್ಯಾಣ ಪರ್ವಕ್ಕೆ ಪೂರ್ವಭಾವಿಯಾಗಿ ಈ ವರ್ಷವೂ ಆರು ಜ್ಯೋತಿಗಳ ಯಾತ್ರೆಯನ್ನು ಅದೇ ಸ್ಥಳಗಳಿಂದ ಹೊರಡಿಸಲಾಗುತ್ತಿದೆ.

ಆದ್ದರಿಂದ ಈ ಪವಿತ್ರವಾದ ಜ್ಯೋತಿ ಯಾತ್ರೆಯಲ್ಲಿ ಭಾಗಿಗಳಾಗಿ ಆದಿ ಶರಣರಿಗೆ ತಮ್ಮ ಕೃತಜ್ಞತೆ ಸಲ್ಲಿಸುವ ಅಪೇಕ್ಷೆಯುಳ್ಳ ಶರಣ ಬಂಧುಗಳು ತಮಗೆ ಬಿಡುವಾಗುವಷ್ಟು ಸಮಯ ಜ್ಯೋತಿ ಯಾತ್ರೆಯಲ್ಲಿ ಪಾಲ್ಗೊಳ್ಳಬಹುದು. ನಮಗೆ ಪತ್ರ ಬರೆದು ಕರಪತ್ರ, ರಸೀತಿ ಪುಸ್ತಕ ತರಿಸಿಕೊಂಡು ದೇಣಿಗೆ ಸಂಗ್ರಹಿಸಿಕೊಡಬಹುದು. ಕರಪತ್ರ, ಭಿತ್ತಿಪತ್ರ (ಪೋಸ್ಟರ್) ತರಿಸಿಕೊಂಡು ತಮ್ಮ ಊರುಗಳಲ್ಲಿ ಪ್ರಚಾರ ಮಾಡಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿ ಕಲ್ಯಾಣ ಪರ್ವವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇವೆ.

ವಿಶೇಷ ಸೂಚನೆ : ಕಳೆದ ವರ್ಷ ನಡೆದ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗಲು ಬಂದ ವಿವಿಧ ರಾಜ್ಯಗಳ ಲಕ್ಷಾಂತರ ಸದ್ಭಕ್ತರು ಪೋಲೀಸರ ದೌರ್ಜನ್ಯದಿಂದ ಬಹಳಷ್ಟು ತೊಂದರೆ ಪಟ್ಟು ನೊಂದು ನಲುಗಿ ವಾಪಸ್ಸು ಹೋಗಿದ್ದಾರೆ. ಆ ರೀತಿ ದೌರ್ಜನ್ಯ ಎಸಗಿದವರು ಬಗೆಬಗೆಯ ಯಾತನೆಗೆ ಒಳಗಾಗಿರುವುದರಿಂದ ಸಾಕಷ್ಟು ಪಶ್ಚಾತ್ತಾಪವನ್ನು ಪಟ್ಟಿರಬಹುದು. ಆದ್ದರಿಂದ ಅವರು ಈಗ ಶರಣ ಬಂಧುಗಳಿಗೆ ತೊಂದರೆ ಕೊಡುವ ಹೇಯ ಕೆಲಸವನ್ನು ಮಾಡಲಾರರು. ಕಳೆದ ಸಲದ ಕಲ್ಯಾಣ ಪರ್ವದ ನಂತರ ಸಾಕಷ್ಟು ಕಾರ್ಯಕ್ರಮಗಳು ಬಸವ ಮಹಾಮನೆಯಲ್ಲಿ ನಡೆದಿವೆ. ವಾರದ ಸಾಮೂಹಿಕ ಪ್ರಾರ್ಥನೆ - ಶರಣ ಸಂಗಮ, ಪ್ರತಿ ತಿಂಗಳಿನ ಹುಣ್ಣಿಮೆಯ ದಿನದಂದು ಶರಣ ಸಮಾಗಮ, ಪೂಜ್ಯ ಶ್ರೀ ಲಿಂಗೈಕ್ಯ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ, ಅಕ್ಟೋಬರ್ ತಿಂಗಳಲ್ಲಿ ತರಬೇತಿ ಕಮ್ಮಟ, 2 ದಿವಸಗಳ ಕಾಲದ ಭಕ್ತಿ ಪಕ್ಷ ಸಮ್ಮೇಳನ ಹೀಗೆ ಯಶಸ್ವಿಯಾಗಿ, ಶಾಂತವಾಗಿ ನಡೆದಿವೆ. ಆದ್ದರಿಂದ ಕಳೆದ ವರ್ಷದ ಕಹಿ ನೆನಪಿನಿಂದ ಹೊರಬಂದು 2003 ರ ಕಲ್ಯಾಣ ಪರ್ವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಆಗಮಿಸಬೇಕೆಂದು ಕೋರುತ್ತೇವೆ.

ಬಸವ ತತ್ತ್ವ ತರಬೇತಿ ಕಮ್ಮಟ

ಪ್ರತಿ ವರ್ಷ ಬೇಸಿಗೆ ಮತ್ತು ದೀಪಾವಳಿ ರಜೆಯ ಸಮಯದಲ್ಲಿ ಬಸವ ಧರ್ಮ ಪೀಠದ ವತಿಯಿಂದ ಬಸವ ತತ್ತ್ವ ತರಬೇತಿ ಕಮ್ಮಟ ನಡೆಸಲಾಗುವುದು. ಅದರಂತೆ ಈ ಸಲವೂ ಏಪ್ರಿಲ್ 18 ರಿಂದ 12 ದಿವಸಗಳ ಕಾಲ ತರಬೇತಿ ಕಮ್ಮಟ ನಡೆಸಲಾಗುವುದು. ಶುಲ್ಕ ಮತ್ತಿತರ ವಿವರಗಳಿಗೆ ಆಸಕ್ತರು ಪತ್ರ ಬರೆಯಿರಿ. ಕಲ್ಯಾಣ ಪರ್ವದ ಸೇವಾಕಾರ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರು ಆಗಮಿಸಬೇಕೆಂದು ಕೋರುತ್ತೇವೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು ಧರೆಯವಗೆ
ವಶವಾಗದಿಹುದೇ ಸರ್ವಜ್ಞ?

ಬಸವ ಕಲ್ಯಾಣವು ಚಾರಿತ್ರಿಕ ಹಿನ್ನೆಲೆಯ ಮಹತ್ವಪೂರ್ಣ ಸ್ಥಳ. ವಿಶ್ವಗುರು ಬಸವಣ್ಣನವರ ಪವಿತ್ರ ಪಾದಸ್ಪರ್ಶದಿಂದ ಪುನೀತವಾದ ಈ ಧರ್ಮಭೂಮಿ ಅಸಂಖ್ಯಾತ ಶರಣರನ್ನು 12ನೆಯ ಶತಮಾನದಲ್ಲಿ ಆಕರ್ಷಿಸಿತು. ಕಲ್ಯಾಣವು ಪ್ರಣತೆಯಾಯಿತು. ಭಕ್ತಿರಸವು ತೈಲವಾಯಿತು. ಸದಾಚಾರವು ಬತ್ತಿಯಾಯಿತು. ಬಸವಣ್ಣನೆಂಬ ಜ್ಯೋತಿ ಮುಟ್ಟಲು ಅಲ್ಲಿ ದೈವೀಪ್ರಕಾಶವು ತೊಳಗಿ ಬೆಳಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತರು ಕಲ್ಯಾಣಕ್ಕೆ ಧಾವಿಸಿದರು. ಧರ್ಮಪಿತ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ವಚನ ಸಾಹಿತ್ಯವೆಂಬ ಅಮೂಲ್ಯ ವಾಙ್ಮಯವನ್ನು ಜಗತ್ತಿಗೆ ನೀಡಿತು. ''ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ'' ಎಂದು ಜಗನ್ಮಾತಾ ಅಕ್ಕಮಹಾದೇವಿ ನುಡಿಯುವಂತೆ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಅವಿಮುಕ್ತ ಕ್ಷೇತ್ರವಾಗಿ ಕಂಗೊಳಿಸಿತು. ಧರ್ಮಪಿತ ಬಸವಣ್ಣನವರು ವಿದ್ಯಾಭ್ಯಾಸ ಮಾಡಿ ತಪಸ್ಸು ಗೈದು ಹೊಸಧರ್ಮವನ್ನು ನೀಡಿ ಮರ್ತ್ಯಲೋಕದ ಮಣಿಹ ಪೂರೈಸಿ ಉರಿಯುಂಡ ಕರ್ಪುರದಂತೆ ಲಿಂಗದೇವನಲ್ಲಿ ಬಯಲಾದುದು ಕೂಡಲಸಂಗಮದಲ್ಲಿ. ಧರ್ಮಗುರು ಬಸವಣ್ಣನವರು ಐಕ್ಯರಾದ ಕೂಡಲ ಸಂಗಮವು ಲಿಂಗಾಯತ ಧರ್ಮಾನುಯಾಯಿಗಳಿಗೆ, ಬಸವ ಭಕ್ತರಿಗೆ ಧರ್ಮಕ್ಷೇತ್ರವಾದರೆ ಬಸವ ಕಲ್ಯಾಣವು ಶರಣ ಭೂಮಿ. ಏಕೆಂದರೆ ಧರ್ಮಪಿತರ ಕಾರ್ಯಕ್ಷೇತ್ರವಾಗಿ 36 ವರ್ಷಗಳ ಕಾಲ ಅಸಂಖ್ಯಾತ ಶರಣರನ್ನು ಪಡೆದ ಪುಣ್ಯ ತಾಣ. ಪೂಜ್ಯ ಗುರು ಬಸವಣ್ಣನವರು ಇಷ್ಟಲಿಂಗಾರ್ಚನೆ ಮಾಡುತ್ತಿದ್ದ ಅರಿವಿನ ಮನೆ, ಚಿನ್ಮಯಜ್ಞಾನಿ ಚನ್ನಬಸವಣ್ಣನವರು ವಚನಗಳನ್ನು ರಚಿಸುತ್ತಿದ್ದ ಚಿನ್ಮಯ ಮಂಟಪ, ಅಲ್ಲಮಪ್ರಭುದೇವರು ನೆಲೆಸಿದ್ದ ಗದ್ದುಗೆ, ಅಕ್ಕನಾಗಲಾಂಬಿಕೆ, ನೀಲಗಂಗಾಂಬಿಕೆ ಮುಂತಾದವರ ಗವಿ, ಮಡಿವಾಳ ಮಾಚಿದೇವರ ಕೊಳ, ನುಲಿಯಚಂದಯ್ಯನವರ ಗವಿ, ರುದ್ರಮುನಿದೇವರ ಗದ್ದುಗೆ, ಹರಳಯ್ಯನವರ ಭಾವಿ (ಉಮಾಪುರ), ಹರಳಯ್ಯ-ಮಧುವರಸರು ಹುತಾತ್ಮರಾದ ಹರಳಯ್ಯನ ದಿಬ್ಬ, ಮೋಳಿಗೆ ಮಾರಯ್ಯನವರ ಗವಿ (ಮೋಳಕೇರಿ), ಬಂದವರ ಓಣಿ, ಧರ್ಮಪಿತರು ಪ್ರಜೆಗಳಿಗೆ ಸಂದರ್ಶನ ನೀಡುತ್ತಿದ್ದ ಪರುಷ ಕಟ್ಟೆ, ಬಸವೇಶ್ವರ ಗುಡಿ, ಇತ್ಯಾದಿ ಈ ಎಲ್ಲ ಚಾರಿತ್ರಿಕ ಕುರುಹುಗಳನ್ನು ಹೊಂದಿರುವ ಬಸವ ಕಲ್ಯಾಣ ಶರಣ ಭೂಮಿ (Holy land) ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ ಕೂಡಲಸಂಗಮ ಮತ್ತು ಬಸವ ಕಲ್ಯಾಣ.

ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಶ್ರೀ ಗುರು ಬಸವಣ್ಣನವರ ದಿವ್ಯ ಪ್ರೇರಣೆಯಂತೆ, 'ಬಸವ ಧರ್ಮ ಪೀಠ' ಎಂಬ ವಿಶ್ವಸ್ಥ ಟ್ರಸ್ಟ್ ಒಂದನ್ನು ಮುಂಬಯಿಯ 1950ನೇ ಟ್ರಸ್ಟ್ ಆ್ಯಕ್ಟ್ ಪ್ರಕಾರ ನೋಂದಾಯಿಸಲಾಗಿದೆ. ನೋಂದಣಿ ಸಂಖ್ಯೆ : ಎ 1758 (BJP) ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಸಂಸ್ಥಾಪಕ

ಗೌರವಾಧ್ಯಕ್ಷರಾಗಿ ಪ್ರಾರಂಭಗೊಂಡ ಈ ಟ್ರಸ್ಟಿನ ಕಾರ್ಯಾಧ್ಯಕ್ಷರಾಗಿ ಈಗ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು, ಕೋಶಾಧ್ಯಕ್ಷರಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಸದಸ್ಯರಾಗಿ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಅಕ್ಕಮಹಾದೇವಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಮಂಗಳಾದೇವಿ, ಪೂಜ್ಯ ಶ್ರೀ ಮಾತೆ ಬಸವರತ್ನಾದೇವಿ, ಪೂಜ್ಯ ಶ್ರೀ ಮಾತೆ ದಾನೇಶ್ವರಿದೇವಿ, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ, ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ ಮುಂತಾದ ತ್ಯಾಗಜೀವಿಗಳು ಹಗಲಿರುಳು ದುಡಿಯುತ್ತಿದ್ದಾರೆ.

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿಮೂರುವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.

ಬಸವ ಧರ್ಮ ಪೀಠ ಟ್ರಸ್ಟಿನ
ಬಸವ ಕಲ್ಯಾಣ ಶಾಖೆಯ ವತಿಯಿಂದ ಹಲವಾರು ಯೋಜನೆಗಳು

ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ.
2. ನಿತ್ಯ ಪೂಜಾ ನಿಧಿ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಕಳಿಸುವುದು. 600 ರೂ.
3. ದಾಸೋಹ ನಿಧಿ : ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು 1200 ರೂ.
4. ಬಸವಾಲಯ ನಿರ್ಮಾಣ : ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು.
5. ಬಸವ ಮಂಟಪ ನಿರ್ಮಾಣ : ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ ''ಬಸವ ಮಂಟಪ'' ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ

ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.

6. ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು
7. 63 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ.
8. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ. ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್ ಕಟ್ಟಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗಿದೆ.

ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

1. ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ, ಬಸವ ಕಲ್ಯಾಣ-585 327. ತಾ- ಬಸವ ಕಲ್ಯಾಣ, ಜಿ-ಬೀದರ, ದೂರವಾಣಿ : 0848-651921/652856
2. ಬಸವ ಧರ್ಮ ಪೀಠ, ಕೇಂದ್ರ ಸಂಸ್ಥೆ, ಮಹಾಮನೆ ಮಹಾಮಠ, ಶರಣ ಲೋಕ, ಕೂಡಲಸಂಗಮ 587115, ತಾ-ಹುನಗುಂದ, ಜಿಲ್ಲೆ-ಬಾಗಲಕೋಟ. ದೂರವಾಣಿ : 0835-768038/768338
3. ಬಸವ ಧರ್ಮ ಪೀಠ, ಶಾಖೆಯ ಕಾರ್ಯಾಲಯ, ಬಸವ ಮಂಟಪ, 2035, 20ನೆಯ ಮೇನ್, 2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010. ದೂ : 080-3325335/3322790.

ಕೂಡಲಸಂಗಮದ ಮಹಾಮನೆ ಮಹಾಮಠ ನಿರ್ಮಾಣಕ್ಕಾಗಿ ಮತ್ತು ಬಸವ ಕಲ್ಯಾಣದ ಬಸವ ಮಹಾಮನೆಯ ನಿರ್ಮಾಣಕ್ಕಾಗಿ ಪ್ರತ್ಯೇಕ ರಸೀತಿ ಪುಸ್ತಕಗಳಿವೆ. ಕಾಣಿಕೆ ಕೊಡುವ ಉದ್ದೇಶವನ್ನು ಅನುಸರಿಸಿ ರಸೀತಿಯನ್ನು ಪಡೆದುಕೊಳ್ಳಿರಿ. ಇನ್‌ಕಮ್ ಟ್ಯಾಕ್ಸ್ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ. ಆಸಕ್ತರು ವಿವರಗಳನ್ನು ಕೇಳಿ ಪಡೆಯಬಹುದು. ಈಗಾಗಲೇ ಕಟ್ಟಡ ನಿರ್ಮಾಣ ಕೆಲಸವು ಪ್ರಾರಂಭವಾಗಿರುವುದರಿಂದ ಸಹೃದಯವಂತ ಧರ್ಮಾನುಯಾಯಿಗಳು ತನು, ಮನ, ಧನಗಳಿಂದ ಉದಾರವಾದ ಧನಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

ಬಸವ ಮಹಾಮನೆ, ಮುಖ್ಯ ರಸ್ತೆ
ಬಸವ ಕಲ್ಯಾಣ-585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

ಕಲ್ಯಾಣ ಜ್ಯೋತಿಯ ಉದ್ದೀಪನ

ಶರಣ ಬಂಧುಗಳೇ,

ನಾವುಗಳೆಲ್ಲ ಕಲ್ಯಾಣದ ಶರಣರ ಪರಂಪರೆಯವರು; ಧರ್ಮಪಿತ ಬಸವಣ್ಣನವರ ಕರುಳ ಬಳ್ಳಿಗಳು. ಇಷ್ಟು ದಿನ ಸುಮಾರು ಎಂಟು ನೂರು ವರ್ಷಗಳ ಕಾಲ ಕತ್ತರಿಸಿಕೊಂಡಿದ್ದ ಸಂಬಂಧವನ್ನು ಇಂದು ಜೋಡಿಸುವ ಸಮಯ ಒದಗಿ ಬಂದಿದೆ.

ಶರಣ ಮೇಳ ಹೇಗೆ ಇನ್ನು ನಿತ್ಯ ನಿರಂತರವಾಗಿ ನಡೆಯುವುದೋ ಹಾಗೆ ಕಲ್ಯಾಣ ಪರ್ವವೂ ನಿರಂತರವಾಗಿ ನಡೆಯುವುದು. ಮೇ 1,2 ಮತ್ತು 3 ಸಾಮಾನ್ಯವಾಗಿ ಕಲ್ಯಾಣ ಪರ್ವ ನಡೆಯುವ ದಿನಾಂಕಗಳು. ಈ ಸಲ ಬಸವ ಜಯಂತಿ ಮೇ 4 ಕ್ಕೆ ಬಂದಿರುವುದರಿಂದ ಊರೂರುಗಳಲ್ಲಿ ಸ್ಥಳೀಯವಾಗಿ ನಡೆಯುವ ಬಸವ ಜಯಂತಿ ಉತ್ಸವಗಳು ಮಂಕಾಗಬಾರದೆಂದು 2003 ನೆಯ ಇಸವಿಯ ಕಲ್ಯಾಣ ಪರ್ವವನ್ನು ಏಪ್ರಿಲ್ 30, ಮೇ 1 ಮತ್ತು 2 ರಂದು ಏರ್ಪಡಿಸುತ್ತಿದ್ದೇವೆ.

ಆದ್ದರಿಂದ ಕಲ್ಯಾಣ ಪರ್ವ ಆರಂಭವಾಗುವ ದಿವಸ ಬೆಳಿಗ್ಗೆ ಬಸವೇಶ್ವರ ಪೂಜಾವ್ರತ ಮಾಡಿ, ಒಂದು ದೀಪವನ್ನು ಹಚ್ಚಬೇಕು. ಇದು ನಂದದಂತೆ ನೋಡಿಕೊಂಡು ಮೂರು ದಿವಸಗಳ ಕಾಲ ಉರಿಸಬೇಕು. ಇದನ್ನು ಕಲ್ಯಾಣ ಜ್ಯೋತಿ ಎಂದು ಕರೆಯಬೇಕು.

ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಸುತ್ತ ಶರಣರು ಮಧ್ಯೆ ಬಸವಣ್ಣನವರು ಇರುವ ಭಾವಚಿತ್ರ ಇಟ್ಟು, ಕಲ್ಯಾಣ ಜ್ಯೋತಿ ಹಚ್ಚಿ ಅದು ಆರದಂತೆ ಗಾಜಿನ ಆವರಣ ಇಟ್ಟು ಬಸವೇಶ್ವರ ಪೂಜಾವ್ರತ ಮಾಡಿರಿ. ಮೇ 1 ರಂದು ಸುತ್ತಲಿನ ಶರಣರನ್ನು ಆಹ್ವಾನಿಸಿ ಸಾಮೂಹಿಕ ಪ್ರಾರ್ಥನೆ ಮಾಡಿ, ಶರಣರಿಗೆ ಶರಣಾರ್ಥಿ ಎಂಬ ಶರಣ-ಸ್ತುತಿಯನ್ನು ಮಾಡಿರಿ. ಮೂರು ದಿವಸಗಳಲ್ಲಿ ಒಂದು ದಿನ ಪ್ರಸಾದ ದಾಸೋಹ ಮಾಡಿಸಿರಿ. ಬಸವ ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವಕ್ಕೆ ಬರಲಾಗದೆ ಇರುವವರನ್ನು ಬಸವ ಮಂಟಪ, ಸಮುದಾಯ ಪ್ರಾರ್ಥನಾ ಮಂದಿರಗಳಿಗೆ ಬರಮಾಡಿಕೊಂಡು ಮೇಲಿನಂತೆ ಕಾರ್ಯಕ್ರಮ ನಡೆಸಿರಿ.

ತಲೆ ಬಾಗಿಲಲ್ಲಿ ದೀಪ - ಬಸವ ಜಯಂತಿ / ಚನ್ನಬಸವ ಜಯಂತಿಗೆ

ಧರ್ಮಪಿತ ಬಸವಣ್ಣನವರು ಜನಿಸಿದ್ದು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ. ಬಸವ ಜಯಂತಿಯಂದು ಬೆಳಿಗ್ಗೆ ಪ್ರತಿ ಮನೆಯ ಮೇಲೆ ಧ್ವಜ ಹಾರಿಸಿ, ಬೆಳಿಗ್ಗೆ ಪೂಜಾವ್ರತ ಮಾಡಿ, ಸಾಮೂಹಿಕವಾಗಿ ಬಸವ ಜಯಂತಿ ಆಚರಿಸಬೇಕು. ತೊಟ್ಟಿಲು ಕಾರ್ಯಕ್ರಮ, ಮೆರವಣಿಗೆ, ಪಥ ಸಂಚಲನ ಮಾಡಬೇಕು. ಸಂಜೆಯ ವೇಳೆ ಮನೆಯ ತಲೆ ಬಾಗಿಲಿನ ಬಳಿ ಷಟ್ ಸಂಜ್ಞೆ (866666) ಗಳ ಸಂಕೇತವಾಗಿ 6 ದೀಪಗಳನ್ನು ಹಚ್ಚಿ ಇಡಬೇಕು. ಕನಿಷ್ಟ ಪಕ್ಷ 3 ದಿವಸಗಳ ಕಾಲ ದೀಪಗಳನ್ನು ಹಚ್ಚಿಡಬೇಕು. ಹೀಗೆ ಬಸವ ಧ್ವಜ ಮನೆಯ ಮೇಲೆ, ಜ್ಯೋತಿ ಜ್ವಲನ ತಲೆಬಾಗಿಲಲ್ಲಿ 3 ದಿನ ನಡೆಯಬೇಕು.

ಅದೇ ರೀತಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜಯಂತಿ ದೀಪಾವಳಿ ಪಾಡ್ಯದಂದು ಬರುತ್ತದೆ. ಕಾರ್ತೀಕ ಶುದ್ಧ ಪ್ರತಿಪ್ರದೆಯಂದು ಚನ್ನಬಸವಣ್ಣನವರು ಜನಿಸಿದ್ದು. ಸಾಂಪ್ರದಾಯಿಕವಾಗಿ ದೀಪಾವಳಿ ದಿನ ದೀಪ ಹಚ್ಚುತ್ತಾರೆ. ನಾವು ಶರಣ ಪರಂಪರೆಯವರು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನಲ್ಲಿ ವಚನ ದೀಪೋತ್ಸವ ಎಂದು 6 ತತ್ತ್ವಗಳ ಸಂಕೇತವಾಗಿ 6 ದೀಪಗಳನ್ನು 3 ದಿವಸಗಳ ಕಾಲ ಹಚ್ಚಿಡಬೇಕು. ಹೀಗೆ 1. ಕಲ್ಯಾಣ ಜ್ಯೋತಿಯನ್ನು ಕಲ್ಯಾಣ ಪರ್ವದ ಸಂಕೇತವಾಗಿ 2. ಬಸವ ಜ್ಯೋತಿಯನ್ನು ಬಸವ ಜಯಂತಿಯ ನಿಮಿತ್ತ 3. ಚನ್ನಬಸವಣ್ಣನವರ ಜಯಂತಿ ನಿಮಿತ್ತ ವಚನ ಜ್ಯೋತಿಯನ್ನು ಹಚ್ಚುವ ಪರಿಪಾಠವನ್ನು ರೂಢಿಸಿಕೊಳ್ಳಬೇಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು

ಸಮಸ್ಯೆ? - ಸಮಾಧಾನ!

ಬಾಣೂರು ಚನ್ನಪ್ಪ, ಬಸವ ಚೈತನ್ಯ, ಚಿಕ್ಕಮಗಳೂರು.- ಒಂದು ಸಮಾರಂಭದಲ್ಲಿ "ಸೃಷ್ಟಿಕರ್ತ ಲಿಂಗದೇವ, ಧರ್ಮ ಕರ್ತ ಬಸವಣ್ಣನವರನ್ನು ಹೃನ್ಮಂದಿರದಲ್ಲಿ ಸ್ಮರಿಸುತ್ತಾ " ಎಂದು ನಾನು ಮಾತನಾಡಲು ಪ್ರಾರಂಭಿಸಿ, ಭಾಷಣ ಮುಗಿಸಿದಾಗ ಸಾನ್ನಿಧ್ಯ ವಹಿಸಿದ್ದ ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮಿಗಳು ನನ್ನನ್ನು ಕುರಿತು ನೀವು ಮಾತೆ ಮಹಾದೇವಿಯವರ ಪ್ರಭಾವಕ್ಕೆ ಒಳಗಾಗಿರಬಹುದೆಂದು ಕಿಡಿಕಾರಿ, ಅವಮಾನಕರ ಮಾತುಗಳನ್ನು ಆಡಿದರು. ಹೀಗೆ ಕೆಲವು ಪ್ರಸಂಗಗಳಲ್ಲಿ ನಾವು ಏನೂ ತಪ್ಪು ಮಾಡದಿದ್ದರೂ ನಮ್ಮ ಗುರುನಿಂದೆಯನ್ನು ಕೇಳುವ ಹಿಂಸೆಗೆ ಒಳಗಾಗಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಏನು ಮಾಡಬೇಕು?

★ ಇಂತಹ ಸಂದರ್ಭಗಳಲ್ಲಿ ನೀವು ಅವಮಾನಿತರಾದಿರೆಂದು ತಿಳಿಯಬಾರದು. "ತನುವಿನ ಕೋಪ ತನ್ನ ಹಿರಿಯತನದ ಕೇಡು" ಎಂಬಂತೆ ಅಂಥ ಕೋಪ, ರಾಗ-ದ್ವೇಷಗಳನ್ನು ಪ್ರದರ್ಶನ ಮಾಡಿಕೊಂಡ ಆ ಸ್ವಾಮಿಗಳ ವ್ಯಕ್ತಿತ್ವ ಬಯಲಾಗಿರುತ್ತದೆ. ಲಿಂಗಾಯತ ಧರ್ಮದ ಶಿಥಿಲತೆ ಮತ್ತು ಸಮಾಜದ ಅನೈಕ್ಯತೆಗೆ ಮೂಲ ಕಾರಣಗಳೇ ಧರ್ಮಕರ್ತ ಬಸವಣ್ಣನವರನ್ನು ದೂರವಿಟ್ಟುದು ಮತ್ತು ಏಕಲಿಂಗೋಪಾಸನೆ ಬಿಟ್ಟು ಬಹುದೇವತೋಪಾಸನೆ, ಕರ್ತೃ ಗದ್ದುಗೆ ಪೂಜೆ, ಜಾತಿ ಪೀಠಗಳನ್ನು ಕಟ್ಟತೊಡಗಿದ್ದು. ರೋಗದ ಮೂಲಕಾರಣ ಗುರುತಿಸಿ ನಾವು ಚಿಕಿತ್ಸೆ ಆರಂಭಿಸಿರುವುದು ಬಹುಪಾಲು ಮಠಾಧಿಪತಿಗಳಿಗೆ ಬಹಳ ಸಂಕಟ ಉಂಟುಮಾಡಿದೆ. ಮಠಾಧಿಪತಿಗಳಿಗೆ (ಅರ್ಥ ಮಾಡಿಕೊಳ್ಳಲು ಅವರು ಪ್ರಾಮಾಣಿಕ ಪ್ರಯತ್ನ ಮಾಡದೆ ಇರುವುದರಿಂದ) ಅರ್ಥವಾಗದ ಲಿಂಗದೇವನ ಪರಿಕಲ್ಪನೆ (concept) ನಿಮ್ಮಂತಹ ಗೃಹಸ್ಥ ಶರಣರಿಗೆ ಅರ್ಥವಾಗುವುದು ಅವರ ಅಸಹನೆಯನ್ನು ಉದ್ರೇಕಿಸದೆ ಇದ್ದೀತೆ ? ನೀವು ಅವರಿಂದ ತೆಗಳಿಸಿಕೊಂಡರೂ ಚಿಂತೆ ಇಲ್ಲ; ಹೇಳಿದುದು ಅಭಿನಂದನೀಯ. ಆ ಸಭೆಯಲ್ಲಿ ಸೇರಿದ ಕೆಲವರಾದರೂ ಚಿಂತನೆ ಮಾಡಲು ಆರಂಭಿಸುತ್ತಾರೆ. ಇದನ್ನು ಗುರುನಿಂದನೆ ಕೇಳಿದಂತಾಯಿತು ಎಂದೇನು ಭಾವಿಸಬೇಕಾಗಿಲ್ಲ. ಅಲ್ಲದೆ ನಮ್ಮ ಎಲ್ಲ ಶರಣರೂ ಭಾಷಣ ಮಾಡುವಾಗ ಮೊದಲು ಸೃಷ್ಟಿಕರ್ತನನ್ನು, ನಂತರ ಧರ್ಮಕರ್ತರನ್ನು ಸ್ಮರಿಸುವ ಶಿಸ್ತು ಇವರು ನಮ್ಮ ಅನುಯಾಯಿಗಳು ಎಂದು ಗೊತ್ತುಮಾಡುವುದು ಹೆಮ್ಮೆ ಪಡುವ ಸಂಗತಿಯಲ್ಲವೆ?

ಬಾಣೂರು ಚನ್ನಪ್ಪ, ಚಿಕ್ಕಮಗಳೂರು.- ನನ್ನ ಒಬ್ಬ ಸನ್ಮಿತ್ರರು, ವಚನ ಸಾಹಿತ್ಯಾಭ್ಯಾಸಿಗಳು, ಶರಣ ಪಥಿಕರು ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರು ದೇವರಿಲ್ಲ, ಆತ್ಮವಿಲ್ಲ ಎಂದು ಹೇಳುವುದಾಗಿಯೂ, ತಮಗೆ ಅದರಿಂದ ಬೇಸರವಾಗಿರುವುದಾಗಿಯೂ ಹೇಳಿದರು. ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ನನಗೆ ನಂಬಲಿಕ್ಕೆ ಆಗುವುದಿಲ್ಲ. ದೇವರು-ಆತ್ಮ ಇಲ್ಲದಿದ್ದ ಮೇಲೆ ಸಹಜ ಶಿವಯೋಗದ ಪ್ರದರ್ಶನವೇಕೆ ? ಕಡಲೆ-ಪುರಿ, ಗೋಲಿ-ಗಜ್ಜುಗ ಕೊಟ್ಟಂತೆ ಕಾರಾಗೃಹಗಳಿಗೆ ಹೋಗಿ ಎಲ್ಲರಿಗೂ ಇಷ್ಟಲಿಂಗ ಹಂಚುತ್ತಿದ್ದರೆ? ಇಷ್ಟಲಿಂಗ ದೇವರ ಕುರುಹು ತಾನೆ? ನಿಮ್ಮ ಮಿತ್ರರು ಸ್ವಾಮಿಗಳ ಮಾತಿನ ಮರ್ಮವನ್ನರಿಯದಿರಬಹುದು. ಗುರು ಮುಖೇನವಾಗಿ ಶಾಸ್ತ್ರೀಯ ಅಧ್ಯಯನ ಇಲ್ಲದಿರುವುದರಿಂದ ಹೇಳುವುದರಲ್ಲಿ, ಬರೆಯುವುದರಲ್ಲಿ ಅವರಲ್ಲಿ ಸ್ಪಷ್ಟತೆ ಇಲ್ಲದಿರಬಹುದು. ಅಥವಾ ಹೀಗೂ ಇರಬಹುದು ಅವರ ಆಡಳಿತಾಧಿಕಾರಿ ಮಾಡುವ ಅನ್ಯಾಯ-ಅಕ್ರಮಗಳನ್ನು ನೋಡಿ ದೇವರು ಇದ್ದಿದ್ದರೆ ಹೀಗೆ ಸುಮ್ಮನೆ ನೋಡುತ್ತಾ ಕುಳಿತು ಕೊಳ್ಳುತ್ತಿದ್ದನೇ? ಎಂಬ ಸಂದೇಹ ಜನರಲ್ಲಿ ಮೂಡಿರುವಂತೆ

ಅವರಲ್ಲೂ ಬಂದು ಹೀಗೆ ಅಂದಿರಲೂಬಹುದು. ಇದೊಂದೇ ದೇವರ ಅಸ್ತಿತ್ವ ನಿರಾಕರಿಸಲು ಸಬಲವಾದ ಕಾರಣ ಆಗದು. ತಾವೇ ಮಾಡಬಹುದಾದ (ಆಡಳಿತಾಧಿಕಾರಿಯ ನಿಯಂತ್ರಣ) ಸಣ್ಣಕೆಲಸಕ್ಕೆ ದೇವರು ಈ ಸದ್ಯದಲ್ಲೇ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ ಎಂದು ನನ್ನ ಅನಿಸಿಕೆ.

ದೇವಿಕಾ ಶರಣಪ್ಪ, ಬೆಂಗಳೂರು.- ದಿ. 25-1-2003 ರಂದು ವೀರಶೈವ ಮಠಾಧೀಶರ ಒಂದು ಸಭೆ ಗುಟ್ಟಾಗಿ ನಡೆಯಿತಂತೆ. ಮೊದಲು ಪತ್ರಿಕೆಯವರನ್ನು, ಇತರ ಜನರನ್ನು ಗಣ್ಯರನ್ನು ಸಹ ಬಿಡಲಿಲ್ಲವಂತೆ. ನಂತರ ಕೆಲವು ಗಣ್ಯರು ಒಳಗೆ ಪ್ರವೇಶಿಸಿದರಂತೆ. ಪಂಚ ಪೀಠಾಧೀಶರು ಹೇಳಿದರಂತೆ, ಇಷ್ಟು ದಿನ ನಾವು ಪ್ರತ್ಯೇಕವಾಗಿ ಉಳಿಯಲು ಕೆಲವು ಭಕ್ತರೇ ಕಾರಣ. ಅವರ ಹಿಡಿತದಲ್ಲಿ ಇದ್ದುದರಿಂದ ಮುಕ್ತವಾಗಿ ಬೆರೆಯಲು ಆಗಲಿಲ್ಲ ಎಂದರಂತೆ. ಇದಕ್ಕೆ ನೀವೇನಂತೀರಿ ?

★ ನನಗೆ ಬಹಳ ಸಂತೋಷವಾಗುತ್ತಿದೆ. ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಎಸ್.ಎಂ. ಕೃಷ್ಣ ಮತ್ತು ಮಲ್ಲಿಕಾರ್ಜುನ ಖರ್ಗೆ ಜೋಡಿಯ ಲಿಂಗಾಯತ ವಿರೋಧಿ ತಂತ್ರಗಳು ಅಂತೂ ಈ ವೀರಶೈವ ಸ್ವಾಮಿಗಳಿಗೆ ಶಾಕ್ ಟ್ರೀಟ್‌ಮೆಂಟ್ ಕೊಟ್ಟು ಎಚ್ಚರಿಸುತ್ತಿವೆ. ಊರೆಲ್ಲ ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಅಂತೂ ತಡವಾಗಿಯಾದರೂ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಆದರಿಷ್ಟೆ ಇವರೆಲ್ಲರ ವಿವಾಹ ಮತ್ತು ವಿಚ್ಛೇದನ ಜನತಾ ದಳದ ಜಾತ್ಯತೀತ ಮತ್ತು ಸಂಯುಕ್ತ ದಳದವರ ವಿವಾಹ ಮತ್ತು ವಿಚ್ಛೇದನದಂತೆ city today (ನಗರದಲ್ಲಿ ಇಂದಿನ) ಕಾರ್ಯಕ್ರಮದಂತೆ ಅರ್ಥಾತ್ ಅಂದಂದೇ ಕೂಡುವುದು, ಅಂದಂದೇ ಜಗಳಾಡುವುದು ಆಗಬಾರದು ಎಂದು ನಮ್ಮ ಹಾರೈಕೆ. ಈವರೆಗೂ ಅವರು ಭಕ್ತ(ಭುಕ್ತ)ರಿಂದ ನಿಯಂತ್ರಿತರಾಗಿದ್ದರು. ಈಗ ಆ ಬಂಧನದಿಂದ ಮುಕ್ತರಾಗಿದ್ದಾರೆ ಎಂಬುದು ಇನ್ನೂ ಸಂತೋಷದ, ಕಿವಿಗೆ ಆಪ್ಯಾಯಮಾನವಾದ ಸುದ್ದಿ. ಆದರಿಷ್ಟೇ ಈಗಾದರೂ ಇವರೆಲ್ಲರನ್ನು ಕೂಡಿಸಬೇಕು ಎಂಬ ಈ ದೃಢ ಪ್ರಯತ್ನದ ಹಿಂದೆ ರಾಜಕೀಯದಲ್ಲಿ ಏನೊಂದೂ ಅಧಿಕಾರಗಳಿಸಿಕೊಳ್ಳಲಾಗದೆ ಪರದಾಡುತ್ತಲಿರುವ ರಾಜಕೀಯ ಭಕ್ತರದೇ ಪ್ರಯತ್ನ ಎಂಬ ಗಾಳಿ ಸುದ್ದಿ ಇದೆ. ಅದಕ್ಕಾಗಿ ನನಗೊಂದು ಕಥೆ ನೆನಪಾಗುತ್ತಿದೆ :

ಒಮ್ಮೆ ಒಬ್ಬ ರಾಜ ವಿಲಕ್ಷಣ ಪ್ರಶ್ನೆಯೊಂದನ್ನು ತನ್ನ ಆಸ್ಥಾನಿಕರಿಗೆ ಕೇಳಿದ "ಹೆಂಡತಿ ಮಾತನ್ನು ಕೇಳದೆ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವವರು ಯಾರಿದ್ದೀರಿ ತಿಳಿಸಿರಿ. ಹೆಂಡತಿ ಮಾತು ಕೇಳುವವರು ಕೈ ಎತ್ತಿರಿ." ಎಲ್ಲರೂ ಕೈ ಎತ್ತಿದರು. ಒಬ್ಬ ಮಾತ್ರ ಹಾಗೆಯೇ ಕುಳಿತಿದ್ದ. ರಾಜನಿಗೆ ಬಹಳ ಸಂತೋಷವಾಯಿತು. ಪರವಾಗಿಲ್ಲ ಒಬ್ಬನಾದರೂ ಧೈರ್ಯವಾನ್ ಇದ್ದಾನಲ್ಲಾ ಎನಿಸಿ, "ಏಕೆ ನೀನು ಕೈ ಎತ್ತಲಿಲ್ಲ. ಹೆಂಡತಿ ಮಾತು ಕೇಳುವವನಲ್ಲವೆ ?" ಎಂದ. ಅವನು ಹೇಳಿದ, "ನಾನು ಮನೆಯಿಂದ ಬರುವಾಗ ಕೈ ಎತ್ತಬೇಕೇ ಎಂಬ ಬಗ್ಗೆ ಹೆಂಡತಿಯ ಒಪ್ಪಿಗೆ ಪಡೆದು ಬಂದಿಲ್ಲ" ಎಂದ. ರಾಜನಿಗೆ ಸುಸ್ತೋಸುಸ್ತು! ಭಕ್ತ(ಭುಕ್ತ)ರ ಅಧೀನದಲ್ಲಿರುವ ಸ್ವಾಮಿಗಳದ್ದೂ ಅದೇ ಪಾಡಾಗಿದೆ. ಅಂತೂ ಈಗ ಅವರು ಮುಕ್ತರಾಗುತ್ತಿರುವುದು ಶುಭಲಕ್ಷಣ.

ಎಂ. ಎಸ್. ಚಂದ್ರಶೇಖರಯ್ಯ, ಬೆಂಗಳೂರು.- ಗುರು-ವಿರಕ್ತರನ್ನು ಒಂದು ಗೂಡಿಸುವ ಅನೇಕರ ಪ್ರಯತ್ನ ಕೈಗೂಡುವ ಸುವರ್ಣಗಳಿಗೆ ಬರುತ್ತಲಿದೆ. ದಿ.25 ರಂದು ಬೆಂಗಳೂರಿನಲ್ಲಿ ಮಠಾಧೀಶರ ಅಂಥ ಒಂದು ಸಭೆ ನಡೆದುದು ಸ್ವಾಗತಾರ್ಹವಲ್ಲವೆ ?

★ ಯಾವುದೇ ತತ್ತ್ವ, ಸಿದ್ಧಾಂತ, ಧ್ಯೇಯ, ಮೌಲ್ಯದಲ್ಲಿ ದೃಢ ವಿಶ್ವಾಸವಿಲ್ಲದೆ ಕೇವಲ ವೀರಶೈವ ಎಂಬಪದವೊಂದರ ಆಧಾರದ ಮೇಲೆ ಎಲ್ಲರನ್ನು ಕೂಡಿಸುವ, ಎಲ್ಲರೂ ಕೂಡುವ ಒಂದು

ಪ್ರಯತ್ನ ನಡೆದಿರುವುದು ಸುಖಾಂತ್ಯ ನಾಟಕವಾದರೆ ಸಾಕು ಎಂದು ನಮ್ಮ ಹಾರೈಕೆ.

ಬಸವರಾಜ್ ಸೂಳೀಭಾವಿ, ಬೆಳಗಾಂವ.- ಅಂಗದ ಮೇಲೆ ಇಷ್ಟಲಿಂಗ ಧರಿಸಿದ ಎಲ್ಲರೂ ಲಿಂಗಾಯತರು ಇದು ಸಾಮಾನ್ಯರಿಗೂ ಅರ್ಥವಾಗುತ್ತಿದೆ. ಕೃತಕವಾಗಿ ವೀರಶೈವ ಪದವನ್ನು ಲಿಂಗಾಯತ ಸಮಾಜದ ಮೇಲೆ ಕೆಲವರು ಹೇರಿರುವುದು ದುರುದ್ದೇಶದಿಂದ. ಇದು ಜನರಿಗೆ ಮನವರಿಕೆಯಾಗುತ್ತಿರುವಾಗ ವೀರಶೈವ ಪದ ಹಿಡಿದು ಲಿಂಗಧಾರಿ ಮಠಾಧೀಶರು ವೀರಶೈವ ಮಠಾಧೀಶರ ಒಕ್ಕೂಟ ರಚಿಸುತ್ತೇವೆ ಎಂಬುದು ಆತ್ಮ ವಂಚನೆಯಲ್ಲವೆ? ಇದರಿಂದ ಲಿಂಗಾಯತ ಸಮಾಜದ ಸಂಘಟನೆಗೆ, ಲಿಂಗಾಯತ ಧರ್ಮದ ಏಳಿಗೆಗೆ ಪೆಟ್ಟು ಬೀಳುವುದಿಲ್ಲವೆ ? ನೀವು ಹೇಳುವ ಸತ್ಯವನ್ನು ಒಪ್ಪಿಕೊಳ್ಳುವ ದೊಡ್ಡ ಮನಸ್ಸು ನಮ್ಮ ಮಠಾಧೀಶರಿಗಿಲ್ಲ. ಕಡೆಗೆ ದಿ|| ಹಿರೇಮಲ್ಲೂರು ಈಶ್ವರನ್ ಮತ್ತು ಎಂ. ಎಂ. ಕಲಬುರ್ಗಿಯವರ ಮಾತುಗಳನ್ನಾದರೂ ಇವರು ಅರಿತುಕೊಳ್ಳಬಾರದೆ?

★ Take it easy ಸಮಾಧಾನವಾಗಿರಿ. ಭಾರತದಲ್ಲಿದ್ದು ಕೊಂಡು ಕ್ರಿಕೆಟನಲ್ಲಿ ಪಾಕಿಸ್ಥಾನ ಗೆದ್ದಾಗ ಪಟಾಕಿ ಹಾರಿಸುವ ಕೆಲವು ಮುಸಲೀಮರಂತೆ ಧರ್ಮಪಿತ ಬಸವಣ್ಣನವರು ಕೊಟ್ಟ ಇಷ್ಟಲಿಂಗ ಧರಿಸಿಯೂ, ಬಸವಣ್ಣನವರನ್ನು ಆದ್ಯರೆಂದು, ಧರ್ಮಗುರುವೆಂದು ಗೌರವಿಸದೆ ಇರುವ ಮಠಾಧೀಶರಲ್ಲಿ 3 ವರ್ಗಗಳಿವೆ.

1. ಪೂರ್ಣ ಬಸವ ದ್ವೇಷಿಗಳು
2. ವಚನ ಸಾಹಿತ್ಯವನ್ನು ಮಾತಿನ ಅಲಂಕಾರಕ್ಕಾಗಿ ಬಳಸಿಕೊಂಡು ಅದರೊಳಗಣ ತತ್ತ್ವವನ್ನು ಮಾನ್ಯ ಮಾಡದಿರುವವರು.
3. ಅಂತರಂಗದಲ್ಲಿ ಸತ್ಯ ಗೊತ್ತಿದ್ದೂ, ಒಳಗೆ ಬಸವ ಭಕ್ತಿ ಇದ್ದರೂ ಸತ್ಯವನ್ನು ನುಡಿಯುವ ಧೈರ್ಯವಿಲ್ಲದೆ ದಿವ್ಯ ಮೌನವನ್ನು ಆಶ್ರಯಿಸಿಕೊಂಡಿರುವವರು.

ಇವರೆಲ್ಲರೂ ಒಂದು ರೀತಿಯಲ್ಲಿ ಒಳಗೇ ಮಾನಸಿಕವಾಗಿ ಬಸವ ದ್ರೋಹ ಮಾಡುತ್ತಿದ್ದು, ಈಗ ಹೊರಗೆ ಒಕ್ಕೂಟ ರಚಿಸಿಕೊಂಡರೆ ಏನು ಪ್ರಳಯವಾಗುವುದೆ ? ಇದರಿಂದ ವೀರಶೈವರ ಸಂಖ್ಯೆ ಜಾಸ್ತಿಯಾದರೆ ಆಗ ತತ್ತ್ವನಿಷ್ಠ ಲಿಂಗಾಯತರ ಸಂಖ್ಯೆ ಕಡಿಮೆಯಾಗುವುದು ತಾನೆ ? ಲಿಂಗಾಯತರು ಧಾರ್ಮಿಕ ಅಲ್ಪ ಸಂಖ್ಯಾತರು ಎಂಬ ಸವಲತ್ತು ಇದರಿಂದಲೇ ಸಿಗುವಂತಾದರೆ ? ಭವಿಷ್ಯ ಗರ್ಭದಲ್ಲಿ ಏನಿದೆಯೊ ನೋಡೋಣ! ನೀವು ಮಾತ್ರ ತತ್ತ್ವಕ್ಕೆ ಬದ್ಧರಾಗಿರಿ.

ಚಂದ್ರಮೌಳಿ ಲಿಂಗಾಯತ್, ಬೆಂಗಳೂರು .- ಬಸವ ಧರ್ಮದ ಮಹಾಜಗದ್ಗುರು ಪೀಠವು ಲಿಂಗಾಯತ ಧರ್ಮದ ಪರಮೋಚ್ಚ ಪೀಠ ಎಂದು ಶರಣೆ. ಚಂದ್ರಮ್ಮ ಮತ್ತು ಕೆಲವರು ಘೋಷಣೆ ಮಾಡುವರಲ್ಲ. ಇದು ಸರಿಯೆ ?

★ ಪ್ರಚಲಿತವಿರುವ ಎಲ್ಲ ಲಿಂಗಾಯತ ಮಠಗಳವರು ತಾವು ವೀರಶೈವರಲ್ಲದಿದ್ದರೂ ವೀರಶೈವ ಮಠಗಳೆಂದು ಕರೆದುಕೊಳ್ಳುತ್ತ ಬಂದರು. ಬಸವಣ್ಣನವರನ್ನು ಧರ್ಮಗುರು, ವಚನ ಸಾಹಿತ್ಯವನ್ನು ಧರ್ಮ ಸಂಹಿತೆ ಎಂದು ಒಪ್ಪುವ ಮಠಗಳು ಲಿಂಗಾಯತ ಮಠಗಳು, ಈ ಎರಡು ಮುಖ್ಯ ಸೂತ್ರಗಳನ್ನು ಒಪ್ಪದವು ಶೈವ ಮತ್ತು ವೀರಶೈವ ಮಠಗಳು. ಹಿಂದಿನ ಸ್ವಾಮಿಗಳು ಒಪ್ಪದೆ ಇದ್ದರೂ ಚಿತ್ರದುರ್ಗದ ಬೃಹನ್ಮಠದ ಈಗಿನ ಸ್ವಾಮಿಗಳು ಬಸವಣ್ಣನವರನ್ನು ಧರ್ಮಗುರು ಮತ್ತು ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಒಪ್ಪುವ ನಿಲುವಿಗೆ ಬಂದರು. ಆದ್ದರಿಂದ ಅಂತಿಮ ಸುತ್ತಿನಲ್ಲಿ ಉಳಿದ ಸ್ಪರ್ಧಿಗಳು ಇವೆರಡೇ ಚಿತ್ರದುರ್ಗ ಬೃಹನ್ಮಠ ಮತ್ತು ಬಸವ ಧರ್ಮಪೀಠ. ಈಗ ಅವರು ಸ್ವಾಮಿ

ಹೆಸರು ತೆಗೆದು ಶರಣ ರಾದರು. ಹೀಗೆ ಸ್ವಯಂ ಪ್ರೇರಣೆಯಿಂದ ಪೀಠ ತ್ಯಾಗ ಮಾಡಿದರು. ಇನ್ನೂ ಮುಂದುವರಿದು, ಬಸವಣ್ಣನವರನ್ನು ಧರ್ಮಗುರು ಎಂದೊಪ್ಪದ, ವಚನ ಸಾಹಿತ್ಯವನ್ನು (ಊಟಕ್ಕೆ ಉಪ್ಪಿನಕಾಯಿಯಂತೆ ಮಾತ್ರ ಬಳಸುವ) ಧಾರ್ಮಿಕ ಸಂವಿಧಾನವೆಂದು ಮನ್ನಿಸದ ವೀರಶೈವ ಮಠಾಧೀಶರ ಒಕ್ಕೂಟದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಆ ಒಕ್ಕೂಟದ ಸದಸ್ಯರೂ ಆಗಲಿದ್ದಾರೆ. ಹೀಗೆಲ್ಲ ಸ್ಪರ್ಧಾಳುಗಳು ಹಿಂದೆಗೆದುದರಿಂದ ಬಸವ-ಲಿಂಗರ ನಿಷ್ಠೆಗೆ ಬದ್ಧವಾಗಿರುವ ಬಸವ ಧರ್ಮ ಪೀಠವು ಲಿಂಗಾಯತ ಧರ್ಮದ ಪರಮೋಚ್ಚ ಪೀಠವಾಗಿ ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ಚಂದ್ರಮ್ಮ ಘೋಷಿಸಿದುದರಲ್ಲಿ ಉತ್ಪ್ರೇಕ್ಷೆ ಏನಿದೆ?

ಚಂದ್ರಶೇಖರ ಮುಚಖಂಡಿ, ಹುಬ್ಬಳ್ಳಿ.- ಮಾಜಿ ಸಚಿವ ಕಾಶಪ್ಪನವರು ಪಂಚ ಪೀಠಾಧೀಶರ ಬೆಂಗಳೂರಿನ ಸಭೆಯಲ್ಲಿ ವಾಗ್ದಾನ ನೀಡಿದ್ದಾರೆ, ತಾವು ಪಂಚಪೀಠಕ್ಕೆ ನಿಷ್ಠರಾಗಿರುವುದಾಗಿಯೂ, ಪಂಚಮಸಾಲೆ ಪೀಠ ಸ್ಥಾಪಿಸುವುದಿಲ್ಲವಾಗಿಯೂ ಹೇಳಿ! ಇದಕ್ಕೆ ಪಂಚಮಸಾಲೆಯವರಿಗೆ ಸಂತೋಷವಾಗಬೇಕೋ ದುಃಖವಾಗಬೇಕೊ?

★ ಎರಡೂ ಆಗಬೇಕು ಮತ್ತು ಈ ಎರಡರಿಂದಲೂ ಹೊರಬರಬೇಕು.

1. ಮತ್ತೊಂದು ಜಾತಿ ಪೀಠವನ್ನು ಹುಟ್ಟುಹಾಕಲು ರಾಜಕಾರಣಿಗಳು ಪ್ರಯತ್ನಿಸುವುದು ತಪ್ಪಿದ್ದಕ್ಕೆ ಸಂತೋಷ.

2. ಆದರೆ ಯಾವುದೇ ಸಂಬಂಧವಿಲ್ಲದೆ, ಅರ್ಥವಿಲ್ಲದೆ ಪಂಚಮಸಾಲೆ, ಪಂಚ ಪೀಠ ಈ ಎರಡೂ ಪದಗಳಲ್ಲಿರುವ ಪಂಚ ಎಂಬ ಪದ ಹಿಡಿದು ಪಂಚಮಸಾಲೆಯವರೆಲ್ಲ ಪಂಚ ಪೀಠಗಳಿಗೆ ನಡೆದುಕೊಳ್ಳಬೇಕೆಂಬ ಅಜ್ಞಾನದಿಂದ ದುಃಖ. ಸಮಾಜವನ್ನು ಒಡೆದು ಆಳಲು ರಾಜಕೀಯ ಪ್ರೇರಿತ ಜನರು ಜಾತಿ ಪೀಠಗಳನ್ನು ಹುಟ್ಟು ಹಾಕುತ್ತಿರುವ ಸಂಚಿನಿಂದ ಪಾರಾಗಿ ಪಂಚಮಸಾಲೆಯವರು ಪಂಚ ಪೀಠಗಳ ಅನುಯಾಯಿಗಳು ಎಂದು ಬಿಂಬಿಸ ಹೋದರೆ ಅದು ಬಾಣಲೆಯಿಂದ ಬೆಂಕಿಗೆ ಬಿದ್ದಂತೆಯೇ ಸರಿ! ಆದ್ದರಿಂದ ಲಿಂಗಾಯತರೊಳಗಣ ಎಲ್ಲ ಜಾತಿ ಉಪಜಾತಿಗಳವರೂ ತಮ್ಮ ಸಣ್ಣತನ ತೊರೆದು ವಿಶಾಲವಾದ ಬಸವ ಪಥವನ್ನು ಆಶ್ರಯಿಸುವುದೇ ನಿಜವಾದ ಪರಿಹಾರ.

ಸಂಗಮೇಶ ಹೊಸಮನಿ.- ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿತ್ತು. ಬಾಗಲಕೋಟೆಯ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀ ಎಂ. ಎಂ. ಕಲಬುರ್ಗಿಯವರು ಮಾತಾಜಿಯವರ ಅನೇಕ ವಿಚಾರ ಕುರಿತು ಸಹಮತವಿದೆ. ಅವರು ವಚನಾಂಕಿತ ವಾಪಸ್ಸು ಪಡೆದರೆ ಅವರೊಡನೆ ಚರ್ಚಿಸಲು ಸಿದ್ಧ ಎಂದಿದ್ದಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನು ?

★ ಅವರು ಸಿದ್ಧರಾದರೂ ನಾವು ಸಿದ್ಧರಿಲ್ಲ. ಅದಕ್ಕೆ ಕಾರಣ -

1. ಸಾಹಿತಿಗಳು ಒಂದು ತತ್ತ್ವವು ಸತ್ಯ ಎಂದು ತಿಳಿದರೂ ಅದನ್ನು ಧೈರ್ಯವಾಗಿ ಪ್ರತಿಪಾದಿಸುವಷ್ಟು ಎದೆಗಾರಿಕೆಯುಳ್ಳವರಲ್ಲ. ಅವರು ಒಂದು ಮಾತನ್ನಾಡಬೇಕಾದರೆ ಕರೆಸಿದವರು ಯಾರು ? ಪಕ್ಕದಲ್ಲಿ ಯಾರ್ಯಾರು ಇದ್ದಾರೆ ? ಈ ಮಾತನ್ನಾಡಿದರೆ ಯಾವ ರೀತಿ ಪ್ರತಿಕ್ರಿಯೆ ಬರಬಹುದು ಎಂದೆಲ್ಲ ಆಲೋಚಿಸುತ್ತಾರೆ. ತತ್ತ್ವವಾದಿಗಳು ಹಾಗಲ್ಲ ನಿರ್ಭಯವಾಗಿ ಸತ್ಯವನ್ನು ಆಡುತ್ತಾರೆ; ಯಾರು ಒಪ್ಪಲಿ ಬಿಡಲಿ ಅನುಮೋದಿಸಲಿ ವಿರೋಧಿಸಲಿ ಸತ್ಯವನ್ನೇ ನುಡಿಯುತ್ತಾರೆ.
2. ಲಿಂಗದೇವ ಒಂದು ಪರಮ ಸತ್ಯ, ಅನರ್ಘ್ಯ ರತ್ನ ಎಂದು ಗೊತ್ತಾದ ಮೇಲೆ ಈ ನಿಧಿಯನ್ನು ಕೈಬಿಡಲು ನಾವು ಸಿದ್ಧರಿಲ್ಲ. ಮುಂದೊಂದು ದಿನ ಎಲ್ಲರೂ ಅರ್ಥಮಾಡಿಕೊಂಡಾಗ (ಈಗಾಗಲೇ

ಹೆಚ್ಚಿನ ಜನರು ಅರ್ಥ ಮಾಡಿಕೊಳ್ಳುತ್ತಿದ್ದಾರೆ) ಸಿಗಬಹುದಾದ ಶ್ರೇಯಸ್ಸಿನ ಮುಂದೆ ಈಗಿನ ಕೆಲವರ ವೈಯಕ್ತಿಕ ಮಾತ್ಸರ್ಯದಿಂದ ಕೂಡಿದ ದ್ವೇಷ, ಅಸಹಕಾರ ನಗಣ್ಯ!

ಮಹಾಂತೇಶ ರಾಜಗೋಳಿ, ಬಾಗಲಕೋಟೆ .- ಮತ್ತೊಬ್ಬ ದೊಡ್ಡ ಸಾಹಿತಿಗಳು ಖಾಸಗಿಯಾಗಿ ಚರ್ಚಿಸುವಾಗ ಲಿಂಗದೇವ ದ ಪರಿಕಲ್ಪನೆ ಸರಿ ಎನ್ನಿಸತೊಡಗಿದೆ. ಆದರಿಷ್ಟೆ ಮಾತಾಜಿಯವರು ಅವಸರ ಮಾಡಿದರು ಎನ್ನಿಸುತ್ತದೆ. ಜನರಿಗೆ ಮೊದಲೇ ಈ ಪರಿಕಲ್ಪನೆ ಬಗ್ಗೆ ತಿಳಿಹೇಳಿ, ಮನವೊಲಿಸಿ, ನಂತರ ಜಾರಿಗೆ ತರಬೇಕಾಗಿತ್ತು. ಆಗ ಇಷ್ಟು ವಿರೋಧ ವ್ಯಕ್ತವಾಗುತ್ತಿರಲಿಲ್ಲ ಎಂದರು. ಅವರ ಸಲಹೆ ಸೂಕ್ತವೆನಿಸದೆ ?

★ ಟಾಂಗಾ ಕುದುರೆಯ ಓಟದ ವೇಗವೇ ಬೇರೆ, ರೇಸ್ ಕುದುರೆಯ ಓಟದ ವೇಗವೇ ಬೇರೆ. ಪಂಡಿತ, ಸಾಹಿತಿ ಲೌಕಿಕರ ಮೆಚ್ಚುಗೆಯ ಹಿನ್ನಲೆಯಲ್ಲಿ ಕೆಲಸ ಮಾಡಿದರೆ, ದಾರ್ಶನಿಕ, ಅನುಭಾವಿ ದೇವರ (ಅಂತರಾತ್ಮದ) ಮೆಚ್ಚುಗೆಯ ಹಿನ್ನಲೆಯಲ್ಲಿ ಕೆಲಸ ಮಾಡುತ್ತಾನೆ. ಭಾರತ ದೇಶದ ಜನರು ಅದರಲ್ಲೂ ಧಾರ್ಮಿಕರು ಪ್ರೌಢರಾಗಿ ಚಿಂತನೆ ಮಾಡಲು ಸಶಕ್ತರಾಗಲು ಇನ್ನೂ ಸಾವಿರ ವರ್ಷ ಕಾಯ್ದರೂ ಸಾಧ್ಯವಿಲ್ಲ. ಅಷ್ಟರೊಳಗೆ ನಮ್ಮ ಆಯುಷ್ಯ ಮುಗಿದೇ ಹೋಗಿರುತ್ತದೆ. ಆದ್ದರಿಂದ ಸಾಹಿತಿಗಳ ವೇಗದಲ್ಲಿ ಹೆಜ್ಜೆ ಹಾಕಲು ದಾರ್ಶನಿಕರಿಗೆ ಸಾಧ್ಯವಿಲ್ಲ, ಅವರದ್ದು ವೇಗದ ಓಟ! ಒಂದಂತೂ ಸತ್ಯ ಲಿಂಗದೇವದ ಪರಿಕಲ್ಪನೆ ಅಮೂಲ್ಯ ಎಂಬುದಾದರೂ ಅವರಿಗೆ ಮನವರಿಕೆಯಾಗಿದೆ ಎಂಬುದು ಹರ್ಷತರುವ ಸಂಗತಿ.

ಅರುಣ ಕೋರಿ, ಬಾಗಲಕೋಟೆ .- ಡಾ|| ಎಂ. ಎಂ. ಕಲುಬುರ್ಗಿ ಬಾಗಲಕೋಟೆ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನೀಡಿದ ಉಪನ್ಯಾಸ ಸತ್ಯ ಸಂಗತಿಗೆ ಕನ್ನಡಿ ಹಿಡಿಯಿತು. ಲಿಂಗಾಯತ ಪದ ಹೆಚ್ಚು ಬಳಕೆ ಮಾಡಿದರು, ಈ ಧರ್ಮ ಹುಟ್ಟಿದ್ದು 12ನೆಯ ಶತಮಾನದಲ್ಲಿ ಎಂದರು. 15ನೆಯ ಶತಮಾನದಲ್ಲಿ ವಚನ ಸಾಹಿತ್ಯ ಕಲುಷಿತಗೊಂಡಿತು ಎಂದರು. ಇದನ್ನೆಲ್ಲ ನಿಮ್ಮಿಂದ ಮೊದಲೆ ಕೇಳಿ ತಿಳಿದಿದ್ದ ನಮಗೆ ಖುಷಿಯೋ ಖುಷಿ! ಆದರೆ ಪುನಃ ಲಿಂಗಾಯತ ಮತ್ತು ವೀರಶೈವ ಒಂದೇ ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಹೇಳಿದರು. ಆಗ ನಮಗೆ ನಿರಾಶೆಯಾಯಿತು. ನಮ್ಮ ಸ್ನೇಹಿತ (ಪತ್ರಿಕಾ ಪ್ರತಿನಿಧಿ) ರೊಡನೆ ಮಾತನಾಡುತ್ತ 'ವೀರಶೈವರು ಮಾಂಸಾಹಾರಿಗಳು ಎಂದು ಮಾತಾಜಿ ಅನ್ನುತ್ತಾರೆ. ಈ ಬಗ್ಗೆ ನನಗೆ ಸಹಮತವಿಲ್ಲ' ಎಂದರಂತೆ. ನಿಮ್ಮ ಅಭಿಪ್ರಾಯವೇನು?

★ ಪತ್ರಿಕೆಗಳಲ್ಲಿ ಡಾ|| ಕಲಬುರ್ಗಿಯವರ ಭಾಷಣ ಓದಿ ನಮಗೂ ಸಂತೋಷವಾಯಿತು. ಅಕ್ಕಸಾಲಿಗರು ಕಿವಿ ಚುಚ್ಚಿದರೆ ನೋವಾಗುವುದಿಲ್ಲ ಎಂಬ ಗಾದೆಯಂತೆ ಕಾರ್ಯಕ್ರಮದ ಪೋಷಕರಾದ ಸುತ್ತೂರು ಶ್ರೀಗಳಿಗೆ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ. ರು. ಚ ಅವರಿಗೆ ಈ ಡೋಸ್ ಅತ್ಯಗತ್ಯವಿತ್ತು. ಏಕೆಂದರೆ ಬಸವಣ್ಣನವರನ್ನು ಧರ್ಮದ ಆದ್ಯರೆಂದು ಅವರು ಒಪ್ಪುವುದಿಲ್ಲ. ಅದಕ್ಕಾಗಿಯೇ ಗೊ. ರು. ಚ ರಿಂದ ನಾವು ದೂರ ಸರಿಯಬೇಕಾಯಿತು. ಅಂತೂ ಕೆಲವು ವಿಷಯಗಳನ್ನು ಡಾ|| ಕಲಬುರ್ಗಿಯವರು ಹಿರೇಮಲ್ಲೂರು ಈಶ್ವರನ್ ಅವರಂತೆ ಸ್ಪಷ್ಟವಾಗಿ ಹೇಳಿದ್ದು ಸಂತೋಷ ನೀಡಿತು. ಆದರೆ ಲಿಂಗಾಯತ ವೀರಶೈವಗಳನ್ನು ಸಮೀಕರಣ ಮಾಡಿದ್ದು ಮಾತ್ರ ಸರಿಯಲ್ಲ. ವೀರಣ್ಣ ಚರಂತಿಮಠ, ತಿಪ್ಪಶೆಟ್ಟಿಯವರಂಥ ವೀರಶೈವ ವಾದಿಗಳನ್ನು ನೋಯಿಸಲು ಇಷ್ಟವಿಲ್ಲದೆ ತಿಪ್ಪೆ ಸಾರಿಸಿರಬಹುದು. ಲಿಂಗಾಯತವು ಒಂದು ಧರ್ಮ-ಪರಿಪೂರ್ಣ ಗೃಹದಂತೆ ; ವೀರಶೈವ ಒಂದು ಪಂಥ-ಮನೆಯೊಳಗಣ ಒಂದು ಕೋಣೆಯಂತೆ. ಎರಡೂ ಸಮವಲ್ಲ. ಇಂದಿಗೂ (ಪೂರ್ವ)

ವೀರಶೈವರು ಆಂಧ್ರ ಮತ್ತು ಕೇರಳಗಳಲ್ಲಿ ಇದ್ದು ಮಾಂಸಾಹಾರಿಗಳಾಗಿದ್ದಾರೆ. ಈ ಸವಾಲನ್ನು ಡಾ|| ಕಲುಬುರ್ಗಿ, ವೀರಶೈವ ಮಹಾಸಭಾ, ಪಂಚ ಪೀಠಾಧೀಶರು, ವೀರಶೈವವಾದಿ ಸ್ವಾಮಿಗಳು ಸ್ವೀಕರಿಸಿದರೆ ಜೊತೆಗೆ ನಾವೂ ಹೋಗಿ ಆ ಗುಂಪುಗಳವರನ್ನು ಭೇಟಿ ಮಾಡಿಸಬಲ್ಲೆವು ; ಅವರ ಸಂಸ್ಕೃತಿಯ ಪರಿಚಯ ಮಾಡಿಸಬಲ್ಲೆವು.

ಸೂರ್ಯಕಾಂತ ಬಿರಾದಾರ, ವಿದ್ಯಾನಗರ, ಬೀದರ್ .- ರಾಜಕೀಯವು ವಿಚಿತ್ರ ಹೊಲಸು. ಮುಟ್ಟಿದವರನ್ನೇ ಮೈಲಿಗೆ ಮಾಡುತ್ತದೆ. ಆದ್ದರಿಂದ ರಾಷ್ಟ್ರೀಯ ಬಸವ ದಳವು ರಾಜಕೀಯವನ್ನು ಪ್ರವೇಶಿಸಲೇ ಬಾರದು ಎಂದು ನನ್ನ ಅಭಿಪ್ರಾಯ. ಪ್ರಾರ್ಥನಾ ಸಭೆಗೆ ಎಲ್ಲ ಪಕ್ಷಗಳವರೂ ಪ್ರಾರ್ಥನೆಗೆ ಬರುತ್ತಾರೆ. ರಾಜಕೀಯ ಪ್ರವೇಶದಿಂದ ರಾಷ್ಟ್ರೀಯ ಬಸವ ದಳಗಳಲ್ಲಿ ಒಡಕು ಉಂಟಾಗುತ್ತದೆ. ಕೆಲವರು ಬರುವುದನ್ನೇ ಬಿಡುತ್ತಾರೆ, ಅದಕ್ಕೆಲ್ಲ ಏಕೆ ಅವಕಾಶ ಮಾಡಿಕೊಡಬೇಕು ?

★ ರಾಷ್ಟ್ರೀಯ ಬಸವ ದಳವಾಗಲಿ, ಬಸವ ಧರ್ಮ ಪೀಠವಾಗಲೀ ರಾಜಕೀಯವನ್ನು ಪ್ರವೇಶಿಸುವುದಿಲ್ಲ. ಆದರೆ, ಪ್ರಾರ್ಥನೆಗೆ ಬರುವವರನ್ನು ಬಸವ ದಳದ ಕಾರ್ಯಕರ್ತರನ್ನು ಚುನಾವಣೆಗೆ ನಿಲ್ಲಬೇಡಿರೆಂದು ಆದೇಶಿಸುವುದು ತಪ್ಪಲ್ಲವೆ ? ಧರ್ಮ, ಪೂಜೆ, ಪ್ರಾರ್ಥನೆ ಎಲ್ಲ ಪಕ್ಷಗಳವರಿಗೂ ಬೇಕು. ಆದರೆ ಅವರ ಉದ್ಯೋಗ ಹೇಗೆ ಬೇರೆಬೇರೆಯೋ ಹಾಗೆ ಆಕಾಂಕ್ಷೆ, ಹವ್ಯಾಸಗಳೂ ಬೇರೆ ಬೇರೆ ಇರುತ್ತವೆ. ಆಶೀರ್ವಾದ ಕೇಳಿದವರಿಗೆ ಆಶೀರ್ವಾದ ನೀಡುವುದಷ್ಟೆ ನಮ್ಮ ಕೆಲಸ; ಬಾಕಿ ಪರಿಶ್ರಮ ಅವರಿಗೆ ಬಿಟ್ಟದ್ದು. ಆದ್ದರಿಂದ ಸಣ್ಣಸಣ್ಣ ಕಾರಣಗಳಿಗೂ ಭಿನ್ನಾಭಿಪ್ರಾಯ ಬೆಳೆಸಿಕೊಂಡು ಧಾರ್ಮಿಕ ಸಂಘಟನೆ ಒಡೆಯುವ ದೌರ್ಬಲ್ಯದಿಂದಾಗಿಯೇ ಲಿಂಗಾಯತ ಸಮಾಜ ಸೊಂಟ ಮುರಿದ ಸಿಂಹ, ಸೊಂಡಿಲು ಮುರಿದ ಆನೆಯಂತಾಗಿರುವುದು. ಬುದ್ಧಿ, ನಾಲಿಗೆ, ಕೈಯಿ ಮೂರು ಮುಖ್ಯ ಅಂಗಗಳು. ಜಾಣರು ಮೊದಲು ಬುದ್ಧಿಯಿಂದ ಚಿಂತನೆ ಮಾಡಿ, ನಂತರ ನಾಲಿಗೆಯಿಂದ ನುಡಿದು, ಕೈಯಿಂದ ಕೆಲಸ ಮಾಡುತ್ತಾರೆ. ಆದರೆ ಲಿಂಗಾಯತರು ಮೊದಲು ಹುಂಬರಂತೆ ಕೈ ಮುಂದೆ ಮಾಡಿ, ಪಟಪಟನೆ ವಿರೋಧಿಸಿ ಮಾತನಾಡಿ, ಮನಸ್ಸು ಒಡೆಸಿಕೊಂಡು ನಂತರ ಬುದ್ಧಿಯಿಂದ ಆಲೋಚಿಸುತ್ತಾರೆ. ಅಷ್ಟೊತ್ತಿಗೆ ಸಮಯ ಮೀರಿರುತ್ತದೆ ? ಉದಾಹರಣೆಗೆ ಲಿಂಗದೇವ ಪ್ರಸಂಗ ನೋಡಿರಿ "ಮಾತಾಜಿಯವರು ಬದುಕಿರುವುದೇ ಬಸವ ತತ್ತ್ವ ಪ್ರಚಾರಕ್ಕಾಗಿ" ಎಂಬುದು ತಿಳಿದಿದ್ದರೂ ಕೆಲವು ಆತ್ಮೀಯರು ಚಿಂತನೆಯನ್ನೇ ಮಾಡದೆ ವಿರೋಧಿಗಳ ತಂತ್ರಕ್ಕೆ ಬಲಿಯಾಗಿ ಪಟಪಟನೆ ದೂರಹೋದರು. ನಂತರ ಸತ್ಯ ತಿಳಿದು ಅಪಾರವಾದ ಮಾನಸಿಕ ವೇದನೆ ಅನುಭವಿಸಿ, ಪುನಃ ಒಬ್ಬೊಬ್ಬರೇ ಪಶ್ಚಾತ್ತಾಪಪಟ್ಟು ಬರುತ್ತಿದ್ದಾರೆ. ಯಾವಾಗಲೂ ನಾಯಕನಿಷ್ಠೆ ಮತ್ತು ಸಮಷ್ಟಿ ಪ್ರಜ್ಞೆ ಇರಬೇಕು. ಅವು ಜೀವಂತ ಸಮಾಜದ ಲಕ್ಷಣಗಳು. ನಾಯಕ ನಿಷ್ಠೆ ವೈಯಕ್ತಿಕವಾಗಿರದೆ ಸಮಷ್ಟಿ ಹಿತ ದೃಷ್ಟಿಯಿಂದ ಇರಬೇಕು. ಮುಸ್ಲೀಮರು ನಮಾಜಿಗೆ ಮಸೀದಿಗೆ ಹೋಗುತ್ತಾರೆ, ಕ್ರೈಸ್ತರು ಚರ್ಚ್‌ಗೆ ಹೋಗುತ್ತಾರೆ. ತಮ್ಮ ಕರ್ತವ್ಯ ಎಂದು ಹೋಗುತ್ತಾರೆ. ಲಿಂಗಾಯತರಂತೆ ಮಾತು ಮಾತಿಗೆ ನೆಪತೆಗೆದು ಪ್ರಾರ್ಥನೆಗೆ ಬರುವುದನ್ನು ಬಿಡುವುದಿಲ್ಲ. ಅವರ ನೇತಾರ ಇಮಾಮ್ ಚುನಾವಣೆಗೆ ಮೊದಲು ಯಾರಿಗೆ ಮತ ನೀಡಬೇಕೆಂದು ಹೇಳುವರೋ ಅವರಿಗೆ ಅಖಂಡವಾಗಿ ಓಟು ಬೀಳುತ್ತವೆ. ಆಗ ಮುಸಲೀಮರು ಅದಕ್ಕೆ ತಕರಾರು ಎತ್ತುವುದಿಲ್ಲ. ವೈಯಕ್ತಿಕವಾಗಿ ತಮಗೆ ಇಷ್ಟವಿಲ್ಲದಿದ್ದರೆ ಅವರು ತಮಗೆ ಬೇಕಾದವರಿಗೆ ಮತ ಹಾಕಿಕೊಳ್ಳುವರೇ ವಿನಾ ನಮಾಜ್‌ಗೆ ಬರುವುದನ್ನು ನಿಲ್ಲಿಸುವುದಿಲ್ಲ. ಆ ಜನರಲ್ಲಿ ಸಮಷ್ಟಿ ಪ್ರಜ್ಞೆ ಇದೆ ಎಂದೇ ಎಲ್ಲಾ ಪಾರ್ಟಿಯವರೂ ಮುಸಲೀಮರನ್ನು ಓಲೈಸುತ್ತಾರೆ, ಪೋಲೀಸರನ್ನು ಬಿಟ್ಟು ಸಾತ್ವಿಕರು,

ಸಜ್ಜನರು ಆದ ಶರಣರನ್ನು ಕಲ್ಯಾಣ ಪರ್ವದಲ್ಲಿ ಚಚ್ಚಿಸಿದ ಎಸ್.ಎಂ. ಕೃಷ್ಣ ಅವರು ಈದಗಾ ಮೈದಾನಕ್ಕೆ ಹೋಗಿ ನಮಾಜ್ ಟೋಪಿ ಹಾಕಿಕೊಂಡು ಮುಂದಿನ ಸಾಲಲ್ಲಿ ಕುಳಿತು ಫೋಟೋಕ್ಕೆ ಪೋಸ್ ಕೊಟ್ಟು ಹೆಮ್ಮೆ ಪಡುತ್ತಾರೆ. ಹಜ್ ಯಾತ್ರೆಗೆ ವಿಶೇಷ ಸಬ್ಸಿಡಿ ಕೊಟ್ಟು, ವಿಶೇಷ ವಿಮಾನ ನೀಡಿ, ಹೋಗುವ ಮೊದಲು ವಿಶೇಷ ವ್ಯವಸ್ಥೆ ಮಾಡಿ ಬೀಳ್ಕೊಡುವರು. ನಮ್ಮ ದುಡ್ಡಿನಲ್ಲಿ ಬಡಪಾಯಿಗಳಾದ ನಾವು ಕಲ್ಯಾಣ ಎಂಬ ಧಾರ್ಮಿಕ ತವರಿನಲ್ಲಿ ಸೇರಿ ಪೂಜೆ-ಪ್ರಾರ್ಥನೆ ಮಾಡಿ ಕೊಳ್ಳುತ್ತೇವೆ ಎಂದರೆ ಮೂರು ಸಾವಿರ ಪೋಲೀಸರನ್ನು ಮೂವತ್ತು ಕಿಲೋಮೀಟರ್ ದೂರದಲ್ಲಿ ನಿಲ್ಲಿಸಿ ಶರಣರನ್ನು ಅಲ್ಲಿಂದಲೇ ಬೆದರಿಸಿ ಓಡಿಸಿದರು. ಇದಕ್ಕೆಲ್ಲ ಪ್ರೇರಕರು ಯಾರು? ಮುಸ್ಲಿಂ ಮತಾಂಧರೇ, ಕ್ರೈಸ್ತ ಮಿಷನರಿಗಳೇ? ಅಲ್ಲ; ವಿಭೂತಿ ಪಟ್ಟೆಯ ಲಿಂಗಾಯತ ನೇತಾರರಾದ ಸಚಿವ ಡಾ|| ಮಲಕರೆಡ್ಡಿ, ಭೀಮಣ್ಣ ಖಂಡ್ರೆ! ಆಹಾ ಎಂಥಾ ಲಿಂಗವಂತರು? ಎಂಥಾ ಒಗ್ಗಟ್ಟು ?! ಅಂದಾಗ ಯಾವ ರಾಜಕೀಯ ಪಕ್ಷದವರು ತಾನೆ ಈ ಸಮಾಜದ ಜನರಿಗೆ ಕಾಸಿನ ಬೆಲೆ ಕೊಟ್ಟಾರು ?

ಓರ್ವ ವ್ಯಕ್ತಿಯಿಂದ ನನಗೇನು ಲಾಭವಿದೆ ? ನನ್ನ ವ್ಯಾಪಾರ ಎಷ್ಟು ವೃದ್ಧಿಯಾಗುತ್ತದೆ ಎಂದು ಚಿಂತಿಸದೆ, ಸಮಾಜ, ಸಮಷ್ಟಿ, ರಾಷ್ಟ್ರದ ಹಿತ ಚಿಂತನೆ ಮಾಡುವುದು ನಿಜವಾದ ಬಸವ ಭಕ್ತರ ಲಕ್ಷಣ. ಆ ಮಟ್ಟಕ್ಕೆ ಏರಿರದ ರಾಷ್ಟ್ರೀಯ ಬಸವ ದಳಗಳವರು ದೂರ ಹೋಗುವುದು, ವಿರೋಧಿಸುವುದು, ಪುನಃ ಹತ್ತಿರ ಬರುವುದು ಅಸಂಭವವೇನಲ್ಲ. ಸಮಾಜದಲ್ಲಿ ಪಕ್ವತೆ ಇಲ್ಲದಿರುವುದರಿಂದ ಇದೆಲ್ಲ ಸ್ವಾಭಾವಿಕ. ಇಂಥ ಸಮಾಜದ ಜೊತೆಗೇ ಒಡನಾಡುತ್ತ, ಮುನ್ನಡೆಸುವುದು ನಮಗೆ ಅನಿವಾರ್ಯ ಕರ್ತವ್ಯವಾಗಿದೆಯಲ್ಲವೆ?

ರಾಜಕೀಯ ಕ್ಷೇತ್ರ ಹೊಲಸು, ಮುಟ್ಟದರೆ ಮೈಲಿಗೆ ಎಂದಿದ್ದೀರಿ. ನಮ್ಮ ದೇಶದಲ್ಲಿ ಯಾವುದು ಶುದ್ಧವಾಗಿ ಉಳಿದಿದೆ ? ಪರಿಶುಭ್ರವಾಗಿ ಉಳಿದು ಉಳಿದೆಲ್ಲವನ್ನು ಶುಚಿ ಮಾಡಬೇಕಾದ ಮಠಾಧಿಪತಿಗಳೇ ಅರಿಷಡ್ವರ್ಗ, ರಾಗ-ದ್ವೇಷ, ಹಿಂಸೆ-ಕ್ರೌರ್ಯ, ಗೂಂಡಾಗಿರಿ ಮುಂತಾದುವನ್ನು ಅಳವಡಿಸಿಕೊಳ್ಳುತ್ತ ಇನ್ನಿತರರ ಆಸ್ತಿಪಾಸ್ತಿ ಕಬಳಿಸಲು ಪೈಪೋಟಿ ನಡೆಸುತ್ತಿರುವಾಗ ಇನ್ನು ರಾಜಕೀಯ ಕ್ಷೇತ್ರದವರಿಗೆ ಬುದ್ಧಿ ಹೇಳಲಾದೀತೆ ? ಇಂಥ ಕಾರ್ಗತ್ತಲಲ್ಲೂ ಮಿಂಚುವ ಕಿರಣಗಳಂತೆ ಎಲ್ಲಾ ರಂಗಗಳಲ್ಲಿ ಒಳ್ಳೆಯ ಜನರು, ಆದರ್ಶವಾದಿಗಳೂ ಇದ್ದಾರೆ. ಅಂಥವರ ಸಂಖ್ಯೆ ಜಾಸ್ತಿಯಾಗಬೇಕು ಅಷ್ಟೇ !

ಶ್ರೀಕಂಠ ಕುಮಾರ್, ಬೆಂಗಳೂರು .- "ವೀರಪ್ಪನ್ ಸಚಿವ ರಾಜೂಗೌಡರನ್ನು ಸಹ ಅಪಹರಣ ಮಾಡಲು ಸಂಚು ಹೂಡಿದ್ದನಂತೆ." ಇದನ್ನು ನಂಬಬಹುದೆ ?

★ ಮೂರ್ಖರು ಅಥವಾ ಹುಚ್ಚರು ಮಾತ್ರ ನಂಬಬಹುದು. ಏಕೆಂದರೆ ವೀರಪ್ಪನ್ ಮಿತ್ರ ದ್ರೋಹ ಮಾಡುವಷ್ಟು ಕೆಟ್ಟವನಲ್ಲ. ಬಹುಶಃ ಮಿತ್ರ ರಾಜೂಗೌಡರಿಗೆ ಪಾರ್ಟಿ ಕೊಟ್ಟು ಬಹಳ ದಿವಸಗಳಾಗಿರಬಹುದು; ಅದಕ್ಕೆ ವನ ಭೋಜನಕ್ಕಾಗಿ ಕರೆ ತರಲು ಸಹಚರರನ್ನು ಕಳಿಸಿರಬಹುದು. ಅಥವಾ ಇನ್ನಾರನ್ನು ಅಪಹರಿಸಬಹುದು ಎಂದು ಸಲಹೆ ಪಡೆಯಲೂ ಆಹ್ವಾನ ಕಳಿಸಿರಬಹುದು. ಸರ್ಕಾರ ಮತ್ತು ಅದರ ಬಾಲಂಗೋಚಿಯಾದ ಪೋಲೀಸ್ ಇಲಾಖೆ ಹಬ್ಬಿಸುವ ಸುದ್ದಿಗಳನ್ನು ಸಾರಾಸಗಟಾಗಿ ನಂಬುವಷ್ಟು ಜನರು ಅಜ್ಞರಾಗಿಲ್ಲ ; ಕೆಟ್ಟ ವ್ಯವಸ್ಥೆಯನ್ನು ಕಂಡೂ ಸಹ ಏನೂ ಮಾಡಲಾರದೆ ನಿಸ್ಸಹಾಯಕರಾಗಿದ್ದಾರೆ ಅಷ್ಟೆ. ವಂಚನೆ, ಮೋಸ ತುಂಡು ಹೊದ್ದಿಕೆಯಂತೆ ; ಒಂದು ಕಡೆ ಮುಚ್ಚ ಹೋದರೆ ಇನ್ನೊಂದು ಕಡೆ ಬಯಲಾಗುತ್ತದೆ.

★★★

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ತನು ಮನ ಧನಗಳಿಂದ ನೆರವು ನೀಡಲು ಶರಣ ಬಂಧುಗಳಲ್ಲಿ ಮನವಿ

ಶರಣ ಬಂಧುಗಳಿಗೆ, ಶರಣು ಶರಣಾರ್ಥಿ

ಬೀದರ ಜಿಲ್ಲೆಯ ಪ್ರಮುಖ ತಾಲ್ಲೋಕು, ಹುಮ್ನಾಬಾದ್. ಅಲ್ಲಿ ಈಗಾಗಲೇ ಆಯ್ಕೆಯಾಗಿದ್ದ ಶಾಸಕರ ಆಯ್ಕೆ ಸುಪ್ರೀಂ ಕೋರ್ಟ್ ಆದೇಶದಿಂದ ಅಸಿಂಧುವಾದ ಕಾರಣ ಉಪ ಚುನಾವಣೆ ಬಂದಿದೆ. ಹುಮ್ನಾಬಾದ್ ಮತಕ್ಷೇತ್ರಕ್ಕೆ 2003 ರ ಫೆಬ್ರವರಿ 26 ಚುನಾವಣೆ ಇದ್ದು ನಾನು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿದಿದ್ದೇನೆ. ಪಕ್ಷೇತರ ಅಭ್ಯರ್ಥಿಯಾಗಿಯೇ ನಿಂತಿದ್ದರೂ ಕಲ್ಯಾಣ ರಾಷ್ಟ್ರ ನಿರ್ಮಾಣ ವೇದಿಕೆಯ ಧ್ಯೇಯಾದರ್ಶಗಳೊಡನೆ ಈ ಚುನಾವಣೆಯಲ್ಲಿ ಭಾಗವಹಿಸುತ್ತಿದ್ದೇನೆ.

ದಿ. 23-9-2002 ರಂದು ಜಂಗಮ ದೀಕ್ಷೆ ಪಡೆದು ಸ್ವಾಮಿಯಾಗಿರುವ ನಾನು ಬಸವ ಧರ್ಮ ಪೀಠದ ಪ್ರಚಾರಕನಾಗಿ ತಮ್ಮೆಲ್ಲರಿಗೂ ಪರಿಚಿತನಾಗಿದ್ದೇನೆ. ಕಾವಿ ಧರಿಸಿದ ನಾನು ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟುದು ನಿಮ್ಮೆಲ್ಲರಿಗೂ ಆಶ್ಚರ್ಯ ತರಬಹುದು. ಇದಕ್ಕೆ ಕಾರಣಗಳು ಮೂರು. 1. ನನ್ನ ತವರು ಜಿಲ್ಲೆಯಾದ ಬೀದರಿನ ಜನರ ಒತ್ತಾಯ. 2. ರಾಜಕೀಯ ಪ್ರವೇಶಿಸಿ ಸಮಾಜ-ರಾಷ್ಟ್ರಗಳ ಸೇವೆ ಮಾಡುವ ಹಂಬಲ. 3. ಅಪ್ಪ ಬಸವಣ್ಣನವರ ಕಾರ್ಯಕ್ಷೇತ್ರ, ಶರಣ ಭೂಮಿ ಬಸವ ಕಲ್ಯಾಣವನ್ನು ಸಂದರ್ಶಿಸಿ ಪುನೀತರಾಗಿ ಕಲ್ಯಾಣ ಪರ್ವದಲ್ಲಿ ಆನಂದ ಹೊಂದಬೇಕು ಎಂದು ಹಂಬಲಿಸಿ ಸಾವಿರಾರು ಕಿಲೋಮೀಟರ್ ದೂರದಿಂದ ಬಂದ ಸಾತ್ವಿಕರಾದ ಶರಣರನ್ನು ಇಂದಿನ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಪೋಲೀಸರ ಮೂಲಕ ಅಮಾನುಷವಾಗಿ ಬೆದರಿಸಿ, ಥಳಿಸಿ ಓಡಿಸಿದುದು. ಇಂಥ ಒಂದು ಅಮಾನುಷ ಕೃತ್ಯದ ಬಗ್ಗೆ ಪ್ರತಿಭಟಿಸಲು ಪರಿಪರಿಯಾಗಿ ವಿನಂತಿಸಿಕೊಂಡರೂ ವಿರೋಧ ಪಕ್ಷದವರು ಮುಖ್ಯವಾಗಿ ಬಿ.ಜೆ.ಪಿ. ಯವರು ವಿಧಾನ ಸಭೆಯಲ್ಲಿ ಚಕಾರವನ್ನು ಎತ್ತಲಿಲ್ಲ. ಕಾಂಗ್ರೆಸ್ಸಿನ ಕ್ರೌರ್ಯ, ಬಿ.ಜೆ.ಪಿ ಯವರ ಸಮಯಸಾಧಕತನ ಕಂಡು ಬಹಳಷ್ಟು ಜನರಿಗೆ ಆಘಾತವಾಯಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನಮ್ಮ ದೀಕ್ಷಾ ಗುರುಗಳು. ಅವರ ಆಶೀರ್ವಾದ ಮತ್ತು ಅನುಮತಿ ಪಡೆದು ಜನರ ಮೇಲೆ ವಿಶ್ವಾಸವಿಟ್ಟು ಯಾವುದೇ ಧನ ಬಲವಿಲ್ಲದೆ ಬಸವ ಗುರು ಕೃಪೆಯನ್ನು ನಂಬಿ ಹೆಜ್ಜೆಯನ್ನಿಟ್ಟಿದ್ದೇನೆ. ಸಾಮಾನ್ಯವಾಗಿ ಚುನಾವಣೆಯಲ್ಲಿ ಮತಗಳಿಗಾಗಿ ನೋಟು ಹಂಚುತ್ತಾರೆ, ನೋಟು ಕೊಟ್ಟು ಓಟು ಪಡೆಯುತ್ತಾರೆ. ಆದರೆ ನಾನು ನಿಮ್ಮಿಂದ ನೋಟು, ಓಟು ಎರಡನ್ನೂ ನಿರೀಕ್ಷಿಸುತ್ತೇನೆ. ಇಂಥ ನಿರೀಕ್ಷೆ ಇಟ್ಟುಕೊಳ್ಳಲು ನನಗೆ ಹಕ್ಕಿದೆ; ಏಕೆಂದರೆ ನಾನು ನಿರಾಹಾರಿ, ಸನ್ಯಾಸಿ. ನನ್ನ ದುಡಿಮೆ ಎಲ್ಲ ಸಮಾಜ ಸೇವೆಗಾಗಿ. ಆದ್ದರಿಂದ ತಮ್ಮಲ್ಲಿ ನನ್ನ ಮನವಿ ಹೀಗಿದೆ

1. ಯಾರ್‍ಯಾರಿಗೆ ಸ್ವತಃ ಬಂದು ಚುನಾವಣಾ ಪ್ರಚಾರ ಮಾಡಲು ಸಾಧ್ಯವೋ ಅವರು ಬಂದು ಮನೆಮನೆಗೆ ಹೋಗಿ ಪ್ರಚಾರ ಕಾರ್ಯ ಕೈಗೊಳ್ಳಿರಿ. ಊಟ-ವಸತಿಯ ವ್ಯವಸ್ಥೆ ಮಾಡುತ್ತೇವೆ.
2. ನಿಮ್ಮ ನಿಮ್ಮ ಪರಿಚಿತರು, ಮಿತ್ರರು, ಬಂಧುಗಳು ಹುಮ್ನಾಬಾದ್ ಮತಕ್ಷೇತ್ರದಲ್ಲಿದ್ದರೆ ಅವರಿಗೆ ಒಂದು ಕಾರ್ಡ್ ಬರೆದು, ಮತ ನೀಡಲು ಪ್ರೇರೇಪಿಸಿರಿ.
3. ಹಣ-ಹೆಂಡ ಹಂಚುವ ಸಂಸ್ಕಾರದವರು ನಾವಲ್ಲ. ಧ್ಯೇಯಾದರ್ಶ ಹೊತ್ತು ಜನರ ಬಳಿ ಮತ ಯಾಚಿಸುತ್ತೇವೆ. ಆದರೆ ಕರಪತ್ರ, ವಾಲ್ ಪೋಸ್ಟರು ಮುದ್ರಣ, ವಾಹನಗಳಲ್ಲಿ ಪ್ರಚಾರ ಮುಂತಾದುವಕ್ಕೆ ಹಣಬೇಕು. ಆದ್ದರಿಂದ ಉದಾರ ಮನಸ್ಸಿನಿಂದ ಸ್ವಯಂ ಪ್ರೇರಣೆಯಿಂದ ನಿಮ್ಮ ದೇಣಿಗೆ ಕಳಿಸಿರಿ. ಬಿಜಾಪುರ ಜಿಲ್ಲೆಯ ಕನಮಡಿ ಗ್ರಾಮದ ಶರಣ. ಅಣ್ಣಾಸಾಹೇಬ ಪೀರಗೌಡ ಪಾಟೀಲರು ಚುನಾವಣಾ ವೆಚ್ಚಕ್ಕೆಂದು ಐದು ಸಾವಿರದ ಒಂದು ರೂಪಾಯಿಗಳ ದೇಣಿಗೆ ಕಳಿಸಿದ್ದಾರೆಂದು ಹೇಳಲು ಹರ್ಷಿಸುತ್ತೇವೆ.

ರಾಷ್ಟ್ರೀಯ ಬಸವ ದಳ ಮತ್ತು ಇತರ ಸಂಘ-ಸಂಸ್ಥೆಗಳವರು ಚುನಾವಣಾ ಪ್ರಚಾರಕ್ಕಾಗಿ ಕಾರ್ಯಕರ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಳಿಸಬೇಕೆಂದು ಕೋರುತ್ತೇವೆ. ಜನತೆಯ ಸೇವೆಯನ್ನು ರಾಜಕೀಯದ ಮೂಲಕ ಮಾಡಲು ತ್ಯಾಗಿಯಾದ ನನಗೆ ಅವಕಾಶ ಮಾಡಿಕೊಟ್ಟು, ಪ್ರೋತ್ಸಾಹಿಸಬೇಕೆಂದು ಎಲ್ಲರಲ್ಲಿ ವಿನಂತಿಸುತ್ತೇನೆ.

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ.

C/o ಶರಣ. ಶಿವರಾಜ ಪಾಟೀಲ್, ಅತಿವಾಳ , ಬಸವ ಸಾಗರ ಕಾಂಪ್ಲೆಕ್ಸ್
ಕೆ.ಇ.ಬಿ. ಬಳಿ, ಬೀದರ್, ದೂರವಾಣಿ: 08482/250315

16 ನೆಯ ಶರಣ ಮೇಳದಲ್ಲಿ ಕೈಗೊಂಡ ನಿರ್ಣಯಗಳು

1. ಮತಾಂತರ ನಿಷೇಧ ಸಲ್ಲದು

ತಮಿಳುನಾಡು ಸರ್ಕಾರವು ಆಲೋಚಿಸುತ್ತಿರುವ ಮತಾಂತರ ನಿಷೇಧ ಜಾರಿಗೆ ಬಂದರೆ, ವ್ಯಕ್ತಿಯ ಧಾರ್ಮಿಕ ಸ್ವಾತಂತ್ರ್ಯಕ್ಕೆ ಚ್ಯುತಿ ಬರುತ್ತದೆ. ಭಾರತೀಯ ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೂ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟಿದೆ. ತಮಗಿಷ್ಟವಾದ ಧರ್ಮವನ್ನು ಸ್ವೀಕರಿಸುವ, ಅನುಸರಿಸುವ ಮೂಲಭೂತ ಹಕ್ಕು ಎಲ್ಲ ಪ್ರಜೆಗಳಿಗೂ ಇದೆ. ಹೀಗಿರುವಾಗ ಮತಾಂತರವನ್ನು ನಿಷೇಧಿಸಿ ವ್ಯಕ್ತಿಯ ಧಾರ್ಮಿಕ ಸ್ವಾತಂತ್ರವನ್ನು ಮೊಟಕುಗೊಳಿಸುವುದು ಮಹಾಪರಾಧ ಎಂದು ಶರಣ ಮೇಳದಲ್ಲಿ ನಿರ್ಣಯ ಕೈಗೊಂಡು ಯಾವುದೇ ಕಾರಣಕ್ಕೂ ಭಾರತದಲ್ಲಿ ಮತಾಂತರ ನಿಷೇಧ ಜಾರಿಗೆ ಬರಕೂಡದೆಂದು ನಿರ್ಣಯಿಸಲಾಯಿತು.

2. ಹಿಂದೂರಾಷ್ಟ್ರವಾಗಬಾರದು - ಹಿಂದೂಸ್ಥಾನವಾಗಲಿ

ಶ್ರೀ ಪ್ರವೀಣ ತೊಗಾಡಿಯಾ ಅವರು ಭಾರತವನ್ನು ಹಿಂದು ರಾಷ್ಟ್ರವೆಂದು ಘೋಷಿಸುವಂತೆ ಹೇಳಿರುವುದು ಖಂಡನೀಯ. ವೈದಿಕ ಧರ್ಮವನ್ನೇ ಸನಾತನ ಹಿಂದೂ ಧರ್ಮವೆಂದು ಈಗಾಗಲೇ ಸರಕಾರವು ಒಪ್ಪಿಕೊಂಡಿರುವುದರಿಂದ ಹಿಂದೂ ರಾಷ್ಟ್ರ ವೆಂದರೆ ಭಾರತದಲ್ಲಿರುವ ಎಲ್ಲ ಪ್ರಜೆಗಳೂ ವೈದಿಕ ಧರ್ಮ ಅಥವಾ ಮನುಸ್ಮೃತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ವಾಸ್ತವದಲ್ಲಿ ಹಿಂದು ಎಂಬುದು ಸಂಸ್ಕೃತಿ ವಾಚಕ ಅಥವಾ ಭೌಗೋಳಿಕ ಪದ. ಭಾರತವನ್ನು ಹಿಂದುಸ್ಥಾನವೆಂದು ಕರೆದರೆ ಇಲ್ಲಿರುವ ಮುಸ್ಲೀಮರು, ಕ್ರೈಸ್ತರು ಸಹ ಒಪ್ಪುತ್ತಾರೆ. ಹಿಂದುಸ್ಥಾನದಲ್ಲಿರುವವರೆಲ್ಲ ಯಾವ ಧರ್ಮದವರೇ ಆಗಿರಲಿ ಹಿಂದುಸ್ಥಾನಿಗಳಾಗಿ ಇರುತ್ತಾರೆ. ಭಾರತವು ಜಾತ್ಯತೀತ ರಾಷ್ಟ್ರವಾಗಿರುವುದರಿಂದ ಇಲ್ಲಿ ಪ್ರತಿಯೊಬ್ಬರಿಗೂ ತಮಗಿಷ್ಟವಾದ ಧರ್ಮವನ್ನು ಪಾಲನೆ ಮಾಡಲು ಅವಕಾಶವಿದೆ. ಆದ್ದರಿಂದ ಭೌಗೋಳಿಕ ಮತ್ತು ಪರಂಪರೆಯ ಸೂಚಕವಾದ ಹಿಂದೂಸ್ಥಾನ ವೆಂದು ಭಾರತಕ್ಕೆ ನಾಮಕರಣ ಮಾಡಬೇಕೆಂದು ಈ ಮೂಲಕ ನಿರ್ಣಯಿಸಲಾಯಿತು.

3. ಕೂಡಲ ಸಂಗಮ ಸುಕ್ಷೇತ್ರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವಂತೆ ಆಗ್ರಹ.

ಕಳೆದ ಹತ್ತಾರು ವರುಷಗಳಿಂದ ನೆನೆಗುದಿಗೆ ಬಿದ್ದಿರುವ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ವಿಷಯ ಕುರಿತು ಉತ್ತರ ಕರ್ನಾಟಕದ ಜನತೆ ಗಂಭೀರವಾಗಿ ಆಲೋಚಿಸಬೇಕು. ಶ್ರೇಷ್ಠ ನ್ಯಾಯಾಲಯದ ನ್ಯಾಯಪೀಠವನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಆದರೆ ಹುಬ್ಬಳ್ಳಿಯಲ್ಲಿ ಆಗಬೇಕು ; ಬೆಳಗಾಂವದಲ್ಲಿ ಆಗಬೇಕು ; ಬಿಜಾಪುರದಲ್ಲಿ ಆಗಬೇಕು ; ಗುಲಬರ್ಗಾದಲ್ಲಿ ಆಗಬೇಕು ಎಂಬ ಭಿನ್ನಾಭಿಪ್ರಾಯ ಮೂಡಿ ಈ ಕುರಿತು ಗೊಂದಲವೆದ್ದಿದೆ. ಆದ್ದರಿಂದ ಸರಕಾರವು ಉದಾಸೀನ ಧೋರಣೆ ತಳೆದಿದೆ. ಎಲ್ಲ ಜಿಲ್ಲೆಯವರು ಒಮ್ಮತದ ನಿರ್ಣಯಕ್ಕೆ ಬಂದು ವಿಶ್ವಗುರು

ಬಸವಣ್ಣನವರ ಐಕ್ಯಕ್ಷೇತ್ರವಾಗಿರುವ ಕೂಡಲ ಸಂಗಮದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಒತ್ತಾಯಿಸಬೇಕು. ಕಾರಣ ಇದು ಅಂತರ ರಾಷ್ಟ್ರೀಯ ಮಟ್ಟದ ಧರ್ಮಕ್ಷೇತ್ರವಾಗಿ ಬೆಳೆಯುತ್ತಲಿದೆ ಮತ್ತು ಭೌಗೋಲಿಕವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಸಮ ದೂರದಲ್ಲಿದೆ. ಆದ್ದರಿಂದ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಜನರು ಪಕ್ಷಭೇದ, ಮತಭೇದ ಮರೆತು ಕೂಡಲ ಸಂಗಮದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಒತ್ತಾಯಿಸ ಬೇಕೆಂದು ನಿರ್ಣಯಿಸಲಾಯಿತು.

4. ಕೂಡಲ ಸಂಗಮದಲ್ಲಿ ವಿಧಾನ ಸಭೆ ಅಧಿವೇಶನ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ ಹಾಗೂ ಐಕ್ಯ ಕ್ಷೇತ್ರವಾಗಿರುವ ಕೂಡಲ ಸಂಗಮ ಸುಕ್ಷೇತ್ರವು ಉತ್ತರ ಕರ್ನಾಟಕ ಭಾಗದ ಸಾಂಸ್ಕೃತಿಕ ಹಾಗೂ ಧಾರ್ಮಿಕ ರಾಜಧಾನಿಯಾಗಿದೆ. ಇದು ಈ ಭಾಗದ ಎಲ್ಲ ಜಿಲ್ಲೆಗಳಿಗೂ ಸಮಾನಾಂತರದಲ್ಲಿರುವ ಕೇಂದ್ರ ಸ್ಥಾನವಾಗಿದೆ. ಭೌಗೋಳಿಕ ಅಸಮಾನತೆಯನ್ನು ತೊಡೆದು ಉತ್ತರ ಕರ್ನಾಟಕವನ್ನು ಅಭಿವೃದ್ಧಿ ಪಡಿಸಬೇಕಾದರೆ ವಿಧಾನ ಸಭೆಯ ಅಧಿವೇಶನವನ್ನು ಕೂಡಲ ಸಂಗಮದಲ್ಲಿಯೇ ನಡೆಸುವ ಅಗತ್ಯವಿದೆ. ಆದ್ದರಿಂದ ವಿಧಾನ ಸಭೆಯ ಒಂದು ಅಧಿವೇಶನವನ್ನು ಈ ಕ್ಷೇತ್ರದಲ್ಲಿ ನಡೆಸುವಂತೆ ಒತ್ತಾಯಿಸಲು ನಿರ್ಣಯಿಸಲಾಯಿತು.

5. ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಗುರು ಬಸವಣ್ಣನವರ ಭಾವಚಿತ್ರ ಹಾಕಿಸುವಂತೆ ಒತ್ತಾಯಿಸುವುದು.

ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಕಳೆದ ವರ್ಷ ಸರ್ಕಾರದ ವತಿಯಿಂದ ಬಸವ ಜಯಂತಿಯನ್ನು ನಾಡ ಹಬ್ಬವಾಗಿ ಆಚರಿಸುವುದು ಮಾತ್ರವಲ್ಲದೆ ಎಲ್ಲ ಸರ್ಕಾರಿ ಕಛೇರಿಗಳಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಗುರು ಬಸವಣ್ಣನವರ ಭಾವಚಿತ್ರ ಹಾಕಿಸುವ ನಿರ್ಣಯ ಕೈಗೊಂಡು ಈಗಾಗಲೆ ಜಾರಿಗೆ ತರಲಾಗಿದೆ. ಆದರೆ ಕರ್ನಾಟಕದಲ್ಲಿಯೇ ಅವತರಿಸಿರುವ ವಿಶ್ವಗುರು ಬಸವಣ್ಣನವರ ಜಯಂತೋತ್ಸವವನ್ನು ಸರ್ಕಾರದ ವತಿಯಿಂದ ಆಚರಿಸದಿರುವುದು ದುರ್ದೈವದ ಸಂಗತಿ. ಮುಂಬರುವ ಬಸವ ಜಯಂತಿಯಿಂದ ಇದನ್ನು ಜಾರಿಗೆ ತರುವುದಲ್ಲದೆ ಎಲ್ಲ ಸರ್ಕಾರಿ ಕಛೇರಿಗಳಲ್ಲಿ ಶಾಲಾ ಕಾಲೇಜುಗಳಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರಗಳನ್ನು ಹಾಕಿಸುವಂತೆ ಒತ್ತಾಯಿಸಲು ನಿರ್ಣಯಿಸಲಾಯಿತು.

6. ಬಸವ ಮಾರ್ಗಿಗಳು ಉಪಜಾತಿ ಎಂಬಲ್ಲಿ ಬಸವಾಯತ ಎಂದು ಬರೆಸಲು ಕರೆ

ಬಸವ ಪ್ರಣೀತ ಲಿಂಗಾಯತ ಧರ್ಮವು ಮಾನವರೆಲ್ಲರಿಗೆ ದೀಕ್ಷೆ ನೀಡುತ್ತದೆ. ದೀಕ್ಷೆ ಪಡೆದವರೆಲ್ಲರೂ ಲಿಂಗಾಯತರು, ನಿಜವಾದ ಬಸವ ಭಕ್ತರು ಉಪಜಾತಿಗಳನ್ನು, ಒಳಪಂಗಡಗಳನ್ನು ಹೇಳಬಾರದು. ಆದರೆ ಇಂದಿನ ಸರ್ಕಾರಗಳು - ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಪಜಾತಿಗಳ ಆಧಾರದ ಮೇಲೆ ವರ್ಗೀಕರಣ ಮಾಡಿ ಸವಲತ್ತುಗಳನ್ನು ಕೊಡುತ್ತವೆ. ಆದ್ದರಿಂದ ಬಸವ ಮಾರ್ಗಿಗಳು ಧರ್ಮ ಎಂಬಲ್ಲಿ ಲಿಂಗಾಯತ ಎಂದು ಬರೆದರೆ ಜಾತಿ (ಉಪಜಾತಿ) ಎಂಬಲ್ಲಿ ಬಸವಾಯತ ಎಂದು ಬರೆಸಬೇಕು.

ಅನ್ನ, ಅರಿವೆ, ಆಶ್ರಯಗಳಂತೆ ಧರ್ಮವೂ ಒಂದು ಮೂಲಭೂತ ಅವಶ್ಯಕತೆ ಎಂದು ತಿಳಿದು ಇಂದು ಅನೇಕರು ಲಿಂಗಾಯತ ಸಂಸ್ಕಾರ ಹೊಂದುತ್ತಾರೆ. ನೌಕರಿ ಮುಂತಾದ್ದಕ್ಕೆ ಅರ್ಜಿ ಹಾಕುವಾಗ ಈ ಜಾತ್ಯತೀತ ಭಾರತದಲ್ಲಿ ಧರ್ಮದ ಜೊತೆ ಜಾತಿಯ ಹೆಸರು ಬರೆಯುವ ಅನಿವಾರ್ಯತೆ ಇದೆ. ಆದ್ದರಿಂದ ಯಾವುದೇ ಜಾತಿಯವರಿರಲಿ ಅವರು ತಮ್ಮ ಮೂಲ ಜಾತಿಗಳ ಹೆಸರನ್ನು ಬರೆಸದೆ, ಲಿಂಗಾಯತರಾದ ಮೇಲೆ ಜಾತಿ (ಉಪಜಾತಿ) ಕಾಲಂನಲ್ಲಿ ಬಸವಾಯತ ಎಂದೇ ಬರೆಸಬೇಕೆಂದು ಮತ್ತು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ಬಸವಾಯಿತ ಪದವನ್ನು ಮಾನ್ಯತೆ ಮಾಡಲು ಅರ್ಜಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

ಬೌದ್ಧ ಧರ್ಮದಲ್ಲಿಯೂ ಸಹ ಈ ರೀತಿಯ ತಿದ್ದುಪಡಿ ಮಾಡಿಕೊಂಡಿದ್ದು ನೂತನವಾಗಿ ಧರ್ಮ ಸ್ವೀಕಾರ ಮಾಡಿ ಬಂದಿರುವವರಿಗೆ ನವ ಬೌದ್ಧ (Neo-Buddiste) ರೆಂದು ಕರೆಯಲಾಗುತ್ತದೆ. ಅದೇ ರೀತಿಯಾಗಿ ಬೇರೆ ಜಾತಿ-ಮತದಿಂದ ಬಂದು ಧರ್ಮ ಸ್ವೀಕಾರ ಮಾಡಿರುವ ಶರಣ ಬಂಧುಗಳು ಬಸವಾಯತ ಎಂದು ಬರೆಸಿದರೆ, ಜಾತಿ-ಮತ-ಪಂಥಗಳ ಭೇದ ನಿವಾರಣೆಯಾಗುವುದಲ್ಲದೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ.

7. ನಾಗಪ್ಪ ಹತ್ಯೆ ಪ್ರಕರಣ : ಸಿ ಬಿ ಐ ತನಿಖೆಗೆ ಒತ್ತಾಯ

"ನರಹಂತಕ ವೀರಪ್ಪನ್‌ನ ಕೈಯಲ್ಲಿ ಒತ್ತೆಯಾಳಾಗಿ ದಾರುಣ ಹತ್ಯೆಗೀಡಾದ ಮಾಜಿ ಸಚಿವ ಶರಣ. ಹೆಚ್. ನಾಗಪ್ಪನವರ ಕೊಲೆ ಪ್ರಕರಣದಲ್ಲಿ ಕರ್ನಾಟಕ ಸರ್ಕಾರದ ಕೈವಾಡವಿದೆ. ಸಚಿವ ರಾಜೂಗೌಡರೇ ಈ ಅಪಹರಣ ಹಾಗೂ ಕೊಲೆ ಘಟನೆಯ ಸೂತ್ರಧಾರರಾಗಿದ್ದಾರೆ" ಎಂಬ ಭಾವನೆ ಎಲ್ಲರಲ್ಲಿ ಮೂಡಿರುವುದರಿಂದ ಸತ್ಯ ಏನೆಂಬುದು ಬೆಳಕಿಗೆ ಬರಬೇಕಾದರೆ ಸಿ.ಬಿ.ಐ. ತನಿಖೆಯಿಂದ ಮಾತ್ರ ಸಾಧ್ಯವಿದೆ. "ಕರ್ನಾಟಕ ಸರ್ಕಾರವು ಈ ಘಟನೆಯನ್ನು ಸಿ.ಬಿ.ಐ. ಗೆ ಒಪ್ಪಿಸಲು ನಿರಾಕರಿಸುತ್ತಿರುವುದೇಕೆಂದರೆ ತನಿಖೆ ನಡೆದು ಸತ್ಯ ಹೊರಬಂದಾಗ ಸರ್ಕಾರವು ಉರುಳಿ ಹೋಗಬೇಕಾಗುತ್ತದೆಂಬ ಭಯ ಕಾಂಗ್ರೆಸ್ ಸರ್ಕಾರದ ಅನೇಕ ಮಂತ್ರಿಗಳಿಗೆ ಕಾಡುತ್ತಿದೆ" ಎಂದೇ ಜನರು ಮಾತನಾಡುತ್ತಿದ್ದಾರೆ.

ನಾಗಪ್ಪನವರಂಥ ಸಜ್ಜನ, ಸಾತ್ವಿಕ ರಾಜಕಾರಣಿಯ ಕೊಲೆಯಿಂದ ಕಾಂಗ್ರೆಸ್ ಸರ್ಕಾರಕ್ಕೆ ಅಳಿಸಲಾರದ ಕಳಂಕ ಹತ್ತಿದೆ. ತಾವು ನಿರಪರಾಧಿಗಳು ಎಂದಾದರೆ ಸಿ.ಬಿ.ಐ. ಗೆ ಒಪ್ಪಿಸಲು ಎಸ್.ಎಂ. ಕೃಷ್ಣ ಸರ್ಕಾರ ಭಯ ಪಡುವ ಕಾರಣವೇ ಇಲ್ಲ. ಆದ್ದರಿಂದ ಈ ಹಿನ್ನಲೆಯಲ್ಲಿ ಕೂಡಲೇ ನಾಗಪ್ಪ ಪ್ರಕರಣವನ್ನು ಕರ್ನಾಟಕ ಸರ್ಕಾರವು ಸಿ.ಬಿ.ಐ. ಗೆ ಒಪ್ಪಿಸಿ ಪ್ರಾಮಾಣಿಕತೆಯನ್ನು ಪ್ರದರ್ಶಿಸಬೇಕೆಂದು ಶರಣ ಮೇಳ ಒತ್ತಾಯಿಸಿದೆ.

8. ಕಲ್ಯಾಣ ಪರ್ವದ ಪ್ರಚಾರಾರ್ಥವಾಗಿ ಜ್ಯೋತಿ ಯಾತ್ರೆ

ಮುಂಬರುವ ಏಪ್ರಿಲ್ 30, ಮೇ 1 ಮತ್ತು 2 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ ಕಲ್ಯಾಣ ಪರ್ವದ ಪ್ರಚಾರಾರ್ಥವಾಗಿ ಕೂಡಲ ಸಂಗಮ, ಉಳಿವೆ, ಸೊಲ್ಲಾಪುರ, ಬಿಜನಹಳ್ಳಿ ಮುಂತಾದ ಪ್ರಮುಖ ಕ್ಷೇತ್ರಗಳಿಂದ ಜ್ಯೋತಿಯಾತ್ರೆಯನ್ನು ಹೊರಡಿಸಲು ಶರಣ ಮೇಳದಲ್ಲಿ ನಿರ್ಣಯಿಸಲಾಯಿತು.

9. ಬಸವಣ್ಣನವರ ಐಕ್ಯಮಂಟಪದಲ್ಲಿ ಉಚಿತ ಪ್ರವೇಶಕ್ಕೆ ಅವಕಾಶ

ಮಂತ್ರಪುರುಷ ಬಸವಣ್ಣನವರ ಐಕ್ಯಮಂಟಪ ದರ್ಶನಕ್ಕಾಗಿ ಭಾರತದ ಎಲ್ಲ ಮೂಲೆಗಳಿಂದ ಹಾಗೂ ವಿದೇಶದಿಂದಲೂ ಸಹ ಭಕ್ತರು ಲಕ್ಷ ಗಟ್ಟಳೆ ಬರುತ್ತಾರೆ. ದುರ್ದೈವದ ಸಂಗತಿ ಎಂದರೆ ಟಿಕೇಟು ಪಡೆದವರಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ. ಆದ್ದರಿಂದ ಗುರು ಬಸವಣ್ಣನವರ ದರ್ಶನಕ್ಕಾಗಿ ನಿಗದಿ ಪಡಿಸಿರುವ ಶುಲ್ಕವನ್ನು ರದ್ದುಗೊಳಿಸಿ ಯಾವುದೇ ನಿರ್ಬಂಧವಿಲ್ಲದೆ ಭಕ್ತರಿಗೆ ಮುಕ್ತ ಅವಕಾಶ ಕಲ್ಪಿಸಿಕೊಡಬೇಕೆಂದು ಆಗ್ರಹಿಸಲು ನಿರ್ಣಯ ಕೈಗೊಳ್ಳಲಾಯಿತು.

10. ಬಿಜಾಪುರ - ಗದಗ ಬ್ರಾಡ್‌ಗೇಜ್‌ಗೆ ಒತ್ತಾಯ

ಗುರು ಬಸವಣ್ಣನವರ ಐಕ್ಯ ಕ್ಷೇತ್ರವಾಗಿರುವ ಕೂಡಲ ಸಂಗಮಕ್ಕೆ ದಿನನಿತ್ಯ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು ಅಂತಹ ಸಂದರ್ಶಕರಿಸಗೆ ಸೌಕರ್ಯ ಒದಗಿಸುವ ದೃಷ್ಟಿಯಿಂದ ಬಿಜಾಪುರ - ಗದಗ ಬ್ರಾಡ್‌ಗೇಜ್ ಮಾರ್ಗವನ್ನು ಕೂಡಲ ಸಂಗಮ ಮಾರ್ಗವಾಗಿ ನಿರ್ಮಿಸುವಂತೆ ಒತ್ತಾಯಿಸಲು ನಿರ್ಣಯಿಸಲಾಯಿತು.

11. ಉಪಚುನಾವಣೆಯಲ್ಲಿ ರಾಷ್ಟ್ರೀಯ ಬಸವ ದಳದ ಪಾತ್ರ

ಭಾರತವು ಪ್ರಜಾಪ್ರಭುತ್ವ ರಾಷ್ಟ್ರ ಆದರೆ ಇಂದಿನ ಬಹುತೇಕ ರಾಜಕಾರಣಿಗಳು ಇದರ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಾರ್ಥಸಾಧಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪ್ರಜಾಪ್ರಭುತ್ವವು ಇಂದು ವಿನಾಶದ ಅಂಚಿನಲ್ಲಿದೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸಾತ್ವಿಕರು, ಸಜ್ಜನರು, ತ್ಯಾಗಿಗಳು ಮುಂದಾಗಬೇಕಾಗಿದೆ. ರಾಜಕೀಯ ಅಪರಾಧೀಕರಣ ತಡೆಯುವುದಕ್ಕಾಗಿ ಧರ್ಮದಲ್ಲಿ ಶ್ರದ್ಧೆ ಹಾಗೂ ರಾಷ್ಟ್ರ ಪ್ರೇಮವುಳ್ಳ ವ್ಯಕ್ತಿಗಳ ಕೈಗೆ ಅಧಿಕಾರ ಕೊಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಬಸವ ದಳ ಸಂಘಟನೆ ಚಿಂತನೆ ನಡೆಸುತ್ತಿದೆ. ಮುಂಬರುವ ಫೆ-26 ರಂದು ಬೀದರ ಜಿಲ್ಲೆಯ ಹುಮನಾಬಾದ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ತಾವು ತಳೆಯಬೇಕಾದ ನಿಲುವಿನ ಬಗ್ಗೆ ಚರ್ಚಿಸಲು ಹುಮನಾಬಾದ ಮತ ಕ್ಷೇತ್ರದ ರಾಷ್ಟ್ರೀಯ ಬಸವ ದಳಗಳ ಬೃಹತ್ ಸಮಾವೇಶವನ್ನು ಹುಮ್ನಾಬಾದ್‌ದಲ್ಲಿ ಫೆಬ್ರವರಿ-1 ರಂದು ಶನಿವಾರ (ಶರಣ ವಾರ) ಹಮ್ಮಿಕೊಳ್ಳಲು ನಿರ್ಣಯಿಸಲಾಯಿತು.

ಕಳೆದ ಮೇ 1,2 ಮತ್ತು 3 ರಂದು ಆಯೋಜಿಸಲಾಗಿದ್ದ ಪ್ರಪ್ರಥಮ ಕಲ್ಯಾಣ ಪರ್ವಕ್ಕೆ ಸ್ವಾರ್ಥ ರಾಜಕಾರಣಿಗಳು ಅಡ್ಡಿ ಪಡಿಸಿರುವ ಹಿನ್ನೆಲೆಯಲ್ಲಿ ಈ ಚುನಾವಣೆಯಲ್ಲಿ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ರಾಜಕೀಯ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲಿಸಬೇಕೇ ? ಬೇಡವೇ ? ಮತ್ತು ಯಾವ ರೀತಿ ಪಾತ್ರ ವಹಿಸಬೇಕೆಂಬುದರ ಕುರಿತು ಬೃಹತ್ ಸಮಾವೇಶದಲ್ಲಿ ಚರ್ಚಿಸುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ಅದ್ಭುತ ಯಶಸ್ಸಿನ ಹದಿನಾರನೆಯ ಶರಣ ಮೇಳ

ಮಹಾಮಾನವತಾವಾದಿ, ಮಂತ್ರಪುರುಷ ಗುರು ಬಸವಣ್ಣನವರ ವಿದ್ಯಾಭೂಮಿ ತಪೋಸ್ಥಾನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ 11 ರಿಂದ 15 ರವರೆಗೆ ನಡೆದ ಹದಿನಾರನೆಯ ಶರಣಮೇಳವು ಅದ್ಭುತ ಯಶಸ್ಸಿನಿಂದ ವಿಜೃಂಭಿಸಿತು. ಪ್ರತಿ ವರ್ಷವೂ ಶರಣಮೇಳಕ್ಕೆ ಬರುವವರ ಸಂಖ್ಯೆ ವೃದ್ಧಿಯಾಗುತ್ತಿದ್ದು ಈ ಬಾರಿ ಲಕ್ಷಾಂತರ ಶರಣರು ಕಾವಿ ಸ್ಕಾರ್ಫ್ ಧರಿಸಿ ಶಿಸ್ತಿನಿಂದ ಶರಣಮೇಳದಲ್ಲಿ ಭಾಗಿಯಾಗಿದ್ದು ಕಣ್ಣಿಗೆ ಹಬ್ಬವನ್ನುಂಟು ಮಾಡಿತು. ಒಂದೆಡೆ ಕೃಷ್ಣಾ ಮಲಾಪಹಾರಿ ನದಿಗಳ ಸಂಗಮದಲ್ಲಿ ಮೈದುಂಬಿ ನಿಂತಿರುವ ಬಸವ ಸಾಗರ, ಮತ್ತೊಂದೆಡೆ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರ ಹಾಗೂ ಇನ್ನಿತರ ಪೂಜ್ಯರ, ಗಣ್ಯರ ದಿವ್ಯ ಜ್ಞಾನವನ್ನು ಸವಿಯಲು, ತನು ಮನ ಬುದ್ಧಿಗಳೆಲ್ಲವನ್ನೂ ಜ್ಞಾನ ಗಂಗೆಯಲ್ಲಿ ಮೀಯಿಸಿಕೊಂಡು ಪಾವನರಾಗುವ ಕಾತುರತೆಯಿಂದ ಮಹಾಮನೆ ಮಹಾಮಠಕ್ಕೆ ಆಗಮಿಸಿದ ಶರಣರ ಮಹಾಪೂರ - ಶರಣ ಸಾಗರ. ದಕ್ಷಿಣದ ಕೃಷ್ಣೆಗೆ ಕರೆವರ್‍ಯಾ ಜನ ನೆರೆವರಯ್ಯಾ ಎಂಬ ಮಾಚಿದೇವರ ಕಾಲಜ್ಞಾನವನ್ನು ಬಸವಾದಿ ಪ್ರಮಥರ ಸಂಕಲ್ಪವನ್ನು ಈಡೇರಿಸುತ್ತಿರುವುದೇ ಈ ಶರಣ ಮೇಳದ ವೈಶಿಷ್ಟ್ಯ.

ಶರಣ ಮೇಳದ ಮೊದಲ ಕಾರ್ಯಕ್ರಮವಾದ ಅಖಂಡ ವಚನ ಪಠಣ ಸಪ್ತಾಹವು ದಿ. 9-1-03 ರಂದು ಬೆಳಿಗ್ಗೆ 8.30 ಕ್ಕೆ ಪ್ರಾರಂಭವಾಯಿತು. ಪರಮ ಪೂಜ್ಯ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಮೊದಲು ವಚನ ಪಠಣವನ್ನು ಮಾಡುವ ಮೂಲಕ ಉದ್ಘಾಟಿಸಿದರು. ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿಯವರು, ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿಯವರು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿಯವರು ನಂತರ ವಚನ ಪಠಣವನ್ನು ಮಾಡಿದರು. ಈ ಕಾರ್ಯಕ್ರಮವು ಶರಣ ಮೇಳ ಮುಗಿಯುವವರೆಗೂ ನಿರಂತರವಾಗಿ ಮುಂದುವರೆಯಿತು.

ಚಿಂತನ ಗೋಷ್ಠಿ

12ನೇ ಶತಮಾನದಲ್ಲಿ ಗುರು ಬಸವಣ್ಣನವರು ಕಟ್ಟಿದ ಜಗತ್ತಿನ ಮೊಟ್ಟ ಮೊದಲ ಪಾರ್ಲಿಮೆಂಟ್ ಎಂದು ಹೆಸರಾದ ಅನುಭವ ಮಂಟಪದಲ್ಲಿ ಹೇಗೆ ಭೇದ ಭಾವವಿಲ್ಲದೆ ಎಲ್ಲರೂ ಒಂದೆಡೆ ಸೇರಿ ಮುಕ್ತವಾಗಿ ಜೀವನದ ವಿವಿಧ ರಂಗಗಳ ಬಗ್ಗೆ ಚರ್ಚಿಸಿ ಹೊಸ ವಿಚಾರಧಾರೆಯನ್ನೇ ಹರಿಸಿದರೋ ಹಾಗೆಯೇ ಅದೇ ಮಾದರಿಯ ಅನುಭವ ಮಂಟಪ ಶರಣ ಮೇಳದಲ್ಲಿ ನಡೆಯುತ್ತಲಿದ್ದು, ಈ ಸಲವೂ ಅನೇಕ ವಿಷಯಗಳನ್ನು ತೆಗೆದುಕೊಂಡು ಚಿಂತನೆ ನಡೆಸಲಾಯಿತು. ಈ ಚಿಂತನ ಗೋಷ್ಠಿಯ ದಿವ್ಯ ಸಾನಿಧ್ಯ ವಹಿಸಿದ್ದ ಬಸವ ಧರ್ಮದ ಪರಮೋಚ್ಚ ಪೀಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಮಾತಾಜಿಯವರು ಚಿಂತನ ಗೋಷ್ಠಿಯಲ್ಲಿ ತದ್ರೂಪು ಸೃಷ್ಟಿ (ಕ್ಲೋನಿಂಗ್) ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ''ವಿಜ್ಞಾನಿಗಳು ಮಾನವನ ಕೆಲವು ಅಂಗಾಂಗಗಳನ್ನು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ನಿಜ, ಬೇರೆ ಬೇರೆ ಅಂಗಾಂಗಗಳನ್ನು ಅವರು ತಯಾರು ಮಾಡಿದ್ದರೂ ಆತ್ಮನನ್ನು ತುಂಬಲು ಯಾರಿಂದಲೂ ಸಾಧ್ಯವಾಗದು. ದೇವನನ್ನು ನಂಬಿ ಶರಣಾಗತ ಮನೋಭಾವ ಹೊಂದಿ ಕಾರುಣ್ಯ ಪಡೆಯಿರಿ'' ಎಂದು ಹೇಳಿದರು.

ಅಮೇರಿಕಾದಿಂದ ಆಗಮಿಸಿದ್ದ ಹೃದಯ ರೋಗ ತಜ್ಞರಾದ ಡಾ|| ಸಿ. ವೀರಪ್ಪನವರು ಮಾತನಾಡಿ, ಇಂದು ನಾವು ವಿಜ್ಞಾನದಲ್ಲಿ ಏನೆಲ್ಲ ಪ್ರಗತಿ ಸಾಧಿಸಿದರೂ ಅದು ಜಗತ್ತಿನಲ್ಲಿ ಇರುವುದನ್ನು ಮಾತ್ರ ಸಂಶೋಧಿಸಿ ತೋರುವುದಾಗಿದೆಯೇ ಹೊರತು ಪರಮಾತ್ಮನು ಸೃಷ್ಟಿಸಿದುದನ್ನು ಹೊರತು ಪಡಿಸಿ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಚಿಂತನ ಗೋಷ್ಠಿಯಲ್ಲಿ ಅನೇಕ ಧಾರ್ಮಿಕ ಆಚರಣೆಗಳ ಬಗ್ಗೆ ಚರ್ಚೆ ನಡೆಯಿತು. ಧಾರ್ಮಿಕ ಉತ್ಸವಗಳಲ್ಲಿ ತೆಂಗಿನಕಾಯಿಗಳನ್ನು ತೇರಿನ ಮೇಲೆ ಎಸೆಯುವುದು, ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗುವಂತೆ ಒಡೆದು ಛಿದ್ರಮಾಡುವುದು, ಪಟಾಕಿ ಸುಡುವ ಬಗ್ಗೆ ಚರ್ಚೆ ನಡೆದು, ತೆಂಗಿನ ಕಾಯಿಯನ್ನು ರಸ್ತೆಯಲ್ಲಿ ಚೂರುಚೂರಾಗಿ ಒಡೆಯುವ ಅವಶ್ಯಕತೆಯಿಲ್ಲ, ಹಾಗೆಯೇ ಪಟಾಕಿ ಸುಡುವುದು ಒಂದು ಅಪರಾಧವೇ ಸರಿ ಎಂದು ನಿರ್ಣಯಿಸಲಾಯಿತು. ಪಟಾಕಿ ಸುಡುವಿಕೆಯಿಂದ ಆರ್ಥಿಕ ನಷ್ಟ ಅಲ್ಲದೆ ಅದರ ಹೊಗೆಯಿಂದ ಅನೇಕ ಮಾರಣಾಂತಿಕ ಕಾಯಿಲೆಗಳಿಗೆ ಮನುಷ್ಯನು ಬಲಿಯಾಗುವನು. ಆದ್ದರಿಂದ ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ನಿರ್ಣಯ ಕೈಗೊಳ್ಳಲಾಯಿತು. ನಂತರ ಲಿಂಗಾಯತ ಧರ್ಮೀಯರು ಉಪಜಾತಿ ಕಾಲಂದಲ್ಲಿ ಬಸವಾಯತ ಎಂದು ಏಕೆ ಬರೆಸಬೇಕು ಎಂಬುದರ ಬಗ್ಗೆ ಮತ್ತು ನಂತರ ಮತಾಂತರ ನಿಷೇಧ ಜಾರಿ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ಚಿಂತನ ಗೋಷ್ಠಿಯನ್ನು ಪೂಜ್ಯ ಶ್ರೀ ಚೆನ್ನಬಸವರಾಜ ಸ್ವಾಮೀಜಿಯವರು ಉದ್ಘಾಟಿಸಿದರು. ಶರಣ. ಸಿ.ಬಿ. ಬೇವನೂರ ರವರು ಬಸವ ಧ್ವಜಾರೋಹಣ ಮಾಡಿದರು. ಪೂಜ್ಯ ಬಸವ ಕುಮಾರ ಸ್ವಾಮೀಜಿ, ಪೂಜ್ಯ ಸಿದ್ದೇಶ್ವರಾನಂದ ಸ್ವಾಮೀಜಿ, ಪೂಜ್ಯ ಚೆನ್ನ ಬಸವಾನಂದ ಸ್ವಾಮೀಜಿಯವರೂ ಸಹ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಶರಣ ಎಸ್.ಟಿ. ಚಂದ್ರಶೇಖರಪ್ಪನವರು ಆಗಮಿಸಿದ್ದರು. ಶರಣ. ಬಿ. ಎಸ್. ಜೋಡಳ್ಳಿ, ಬಸವರಾಜೇಂದ್ರಪ್ಪ, ಎಂ. ಜಯದೇವ್ ರವರೂ, ಶರಣ. ಅಣ್ಣಪ್ಪ ವಾಲಿ, ಶರಣೆ. ಡಾ|| ಸುಶೀಲಮ್ಮ ಅವರೂ ಚಿಂತನಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಧಾರ್ಮಿಕ ರಸಪ್ರಶ್ನೆ ಕಾರ್ಯಕ್ರಮ: ಆಧ್ಯಾತ್ಮಿಕ, ಶರಣರ ಜೀವನ, ವಚನಗಳ ಆಧಾರದ ಮೇಲೆ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮ ನೆರೆದಿದ್ದ ಶರಣ ಸಮೂಹಕ್ಕೆ ಅತ್ಯುತ್ತಮ ಆತ್ಮರಂಜನೆ ನೀಡಿತು. ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ ಮತ್ತು ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಶರಣ ಮೇಳ - ಉದ್ಘಾಟನಾ ಸಮಾರಂಭ

ದಿ. 12 ರಂದು ಬೆಳಿಗ್ಗೆ 10-30ಕ್ಕೆ ಶರಣ ಮೇಳ ಉದ್ಘಾಟನಾ ಸಮಾರಂಭವು ನಡೆಯಿತು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಪೂಜ್ಯ ಮಾತಾಜಿಯವರು, ಶರಣ ಎಂದರೆ universal citizen ವಿಶ್ವಪ್ರಜೆ. ಜಾತಿ , ಮತ, ವಿದ್ಯೆ, ಶ್ರೀಮಂತಿಕೆ, ಅಧಿಕಾರ ನೋಡಿ ಇವ ನಮ್ಮವ ಇವ ನಮ್ಮವ ಎನ್ನದೇ ಎಲ್ಲರನ್ನು ಇವ ನಮ್ಮವ ಇವ ನಮ್ಮವ ಎನ್ನಬೇಕು. ಆಗ ಅವನೇ ವಿಶ್ವಪ್ರಜೆ - ಶರಣ ಎಂದು ಅದರ ವಿಶಾಲಾರ್ಥವನ್ನು ಮನಮುಟ್ಟುವಂತೆ ವಿವರಿಸಿ ಹೇಳಿದರು. ಶರಣ ಮೇಳ ಇದು ಒಂದು ಕೋಮಿನ ಮೇಳವಲ್ಲ ಜಾತಿ ಮತ ಪಂಥಗಳನ್ನು ಮೀರಿ ದೇವನಿಗೆ ಶರಣಾದ ಎಲ್ಲರೂ ಶರಣರು. ಅಂಥ ಶರಣರ ಮೇಳವಿದು ಎಂದು ಶರಣ ಮೇಳದ ವೈಶಿಷ್ಟ್ಯವನ್ನು ವಿವರಿಸಿದರು. ಬಸವಣ್ಣನವರು ಕೊಟ್ಟುದು ಧರ್ಮವನ್ನೇ ಹೊರತು ಜಾತಿಯನ್ನಲ್ಲ. ಸನಾತನ ಧರ್ಮವು ಎಲ್ಲರನ್ನೂ ಒಂದು ಸಮಾನ ತತ್ವದಡಿ ಒಂದುಗೂಡಿಸುವ ಸೂತ್ರವನ್ನು ಕೊಟ್ಟಿಲ್ಲ. ಆದರೆ ಬಸವಣ್ಣನವರು ಜಾತಿ ಮತ ಪಂಥಗಳ ಸೀಮೆಯನ್ನು ದಾಟಿ ಎಲ್ಲರನ್ನೂ ಧಾರ್ಮಿಕ ತಳಹದಿಯ ಮೇಲೆ ಒಂದುಗೂಡಿಸಿ ಹೊಸ ಧರ್ಮವನ್ನೇ ಕೊಟ್ಟರು. ಭಾರತೀಯ ಪರಂಪರೆಯೆಂದರೆ ವೈದಿಕ ಪರಂಪರೆ ಎಂದು ತಿಳಿಯಬಾರದು, ಭಾರತೀಯ

ಪರಂಪರೆಯೇ ಬೇರೆ, ವೈದಿಕ ಪರಂಪರೆಯೇ ಬೇರೆ. ಹಿಂದೂ ಧರ್ಮ ವರ್ಣಾಶ್ರಮ, ಮೂಢನಂಬಿಕೆಯನ್ನು ಪೋಷಿಸಿದರೆ ಬಸವಣ್ಣನವರು ಅವನ್ನೆಲ್ಲ ತೊಡೆದು ಹಾಕಿ ವಿಶ್ವ ವಿನೂತನ ವೈಚಾರಿಕ ಧರ್ಮವನ್ನು ನೀಡಿದರು ಎಂದು ಪೂಜ್ಯ ಮಾತಾಜಿಯವರು ತಿಳಿಸಿದರು.

ಪ್ರತಿಯೊಬ್ಬರೂ ಪ್ರಗತಿಪರ ವಿಚಾರವಂತರಾಗಬೇಕೆಂದು ಕರೆ ನೀಡಿದ ಅವರು ಹಿಂದೆ ಗ್ರಹಗಳನ್ನು ಗುರುತಿಸಿ, ಆ ಹೆಸರುಗಳನ್ನು ದಿನಗಳಿಗೆ ಇಟ್ಟರು. ಹೆಸರಿಟ್ಟ ನಂತರ ತಾವೇ ಹೆಸರಿಟ್ಟೂ ಸಹ ಮತ್ತೆ ಅಸಂಬದ್ಧ ಕಾಲ್ಪನಿಕ ಕಥೆಗಳನ್ನು ಹೆಣೆದು ಆ ದಿನ ಒಳ್ಳೆಯದು, ಈ ದಿನ ಕೆಟ್ಟದ್ದು ಎಂದು ಹೇಳುತ್ತಾರೆ. ಉದಾ: ಮಂಗಳವಾರ- ಅಮಂಗಲ ಅಂದು ಒಳ್ಳೆಯ ಕೆಲಸ ಮಾಡಬಾರದು. ಬುಧವಾರ - ಬೂದಿವಾರ, ಆದಿತ್ಯವಾರ - ಅಯ್ಯೋ ಹೋಯ್ತೋ, ಶುಕ್ರವಾರ - ಅಂದು ಹಣವನ್ನು ಯಾರಿಗೂ ಕೊಡಬಾರದು. ಇನ್ನು ಶನಿವಾರ - ಶನಿ ಬೆನ್ನು ಹತ್ತುತ್ತೆ ಒಳ್ಳೆ ಕೆಲಸ ಮಾಡಿದರೆ ; ಹೀಗೆ ಅಸಂಬದ್ಧ ಕಲ್ಪನೆ ಮಾಡಿಕೊಂಡು ಮೂಢನಂಬಿಕೆಗಳ ದಾಸರಾಗಿದ್ದಾರೆ. ಆದ್ದರಿಂದ ಈ ವಾರಗಳ ಹೆಸರನ್ನು ಬದಲಾವಣೆ ಮಾಡಿರುವೆವು. ಭಾನುವಾರ - ದೇವವಾರ ; ಸೋಮವಾರ - ಶಿವವಾರ ; ಮಂಗಳವಾರ - ಬಸವವಾರ; ಬುಧವಾರ - ಚೆನ್ನವಾರ ; ಗುರುವಾರ - ಪ್ರಭುವಾರ ; ಶುಕ್ರವಾರ - ಮಾತೃವಾರ ; ಶನಿವಾರ - ಶರಣ ವಾರ ಹೀಗೆ ಬದಲಾವಣೆ ಮಾಡಿಕೊಂಡಾಗ ಮೂಢ ಆಚರಣೆಗೆ ಆಸ್ಪದವೇ ಇರದು'' ಎಂದು ಪೂಜ್ಯ ಮಾತಾಜಿಯವರು ಹೇಳಿದಾಗ ಜನರು ಕರತಾಡನ ಮಾಡಿ ಸಂತೋಷ ವ್ಯಕ್ತ ಪಡಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶರಣ. ಡಾ|| ಸಿ. ವೀರಪ್ಪನವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಳಗಾಂನ ಚಾರಿಟಿ ಕಮೀಷನರ್ ಶರಣ. ವಿಜಯ. ಬಿ. ಸಿರಿಯಣ್ಣನವರು ಮಾತನಾಡಿ, ''ದೇಶ ನನಗಾಗಿ ಏನು ಮಾಡಿದೆ ಎಂದು ಕೇಳದೆ ದೇಶಕ್ಕಾಗಿ ನಾನು ಏನು ಮಾಡಿದ್ದೇನೆ ಎಂದು ಯೋಚಿಸು'' ಎಂಬ ಮಹಾತ್ಮರ ವಾಣಿಯನ್ನು ಉದಾಹರಿಸಿ ರಾಷ್ಟ್ರಪ್ರೇಮ ಮತ್ತು ಧರ್ಮವಂತಿಕೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ನ್ಯಾಯಾಧೀಶರಾದ ಎಸ್.ಎಸ್. ನಾಗರಾಳೆ ಅವರು ಉಪಸ್ಥಿತರಿದ್ದರು.

ಶರಣ. ಡಿ.ಪಿ. ಪ್ರಕಾಶ್‌ರವರು ಪೂಜ್ಯ ಮಾತಾಜಿಯವರ - ಕಲ್ಯಾಣ ಕಿರಣ ಸಂಪಾದಕೀಯಗಳ ಸಂಗ್ರಹ ಪುಸ್ತಕ - ಮಾತೃಹರಕೆಯನ್ನು ಬಿಡುಗಡೆ ಮಾಡಿ ಪೂಜ್ಯ ಮಾತಾಜಿಯವರ ವ್ಯಕ್ತಿತ್ವ ಕುರಿತು ಮಾತನಾಡಿದರು.

ಶರಣ ಮೇಳದ ಮಧ್ಯಾಹ್ನದ ಗೋಷ್ಠಿ 3-30 ಕ್ಕೆ ಪ್ರಾರಂಭವಾಯಿತು. ವಿಶ್ವಗುರು ಬಸವಣ್ಣನವರು ಕೊಟ್ಟಂಥ ಲಿಂಗಾಯತ ಧರ್ಮವು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ. ಕೇವಲ ಹೇಳುವುದರಿಂದ, ಕೇಳುವುದರಿಂದ ಧರ್ಮ ರಕ್ಷಣೆ ಸಾಧ್ಯವಿಲ್ಲ. ವಚನ ಸಾಹಿತ್ಯವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರಿನ ಶರಣೆ. ಸರೋಜಮ್ಮ ನಾಗರಾಜು ಕರೆ ಕೊಟ್ಟರು. ಅವರು 16 ನೆಯ ಶರಣ ಮೇಳದ 3 ನೆ ಚಿಂತನ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡುತ್ತ ತನು-ಮನ-ಧನಗಳಿಂದ ಧರ್ಮ ಸಮಾಜಗಳಿಗಾಗಿ ದುಡಿಯಲು ಸಿದ್ಧರಾಗಬೇಕಾಗಿದೆ ಎಂದರು. ಬಿಜಾಪುರದ ಕೃಷಿ ಅಧಿಕಾರಿಗಳಾದ ಶರಣ. ಸಿ.ಬಿ. ಬೇವನೂರ ಅವರು ಮಾತನಾಡಿ ಇಷ್ಟಲಿಂಗ ಇದು ಸೃಷ್ಟಿಕರ್ತ ಲಿಂಗದೇವನ ಕುರುಹು; ಲಿಂಗಾಯತರು ಬಹುದೇವತೋಪಾಸನೆಯನ್ನು ಬಿಟ್ಟು ಇಷ್ಟಲಿಂಗದಲ್ಲಿ ನಿಷ್ಠೆ ಹಾಗೂ ಧರ್ಮಗುರು ಬಸವಣ್ಣನವರಲ್ಲಿ ಶ್ರದ್ಧೆ ಬೆಳೆಸಿಕೊಳ್ಳುವವರೆಗೆ ಸಮಾಜ ಸಂಘಟನೆ ಸಾಧ್ಯವಿಲ್ಲವೆಂದು ಹೇಳಿದರು.

ಇನ್ನೋರ್ವ ಉಪನ್ಯಾಸಕ ಕೆ. ಬಸವರಾಜ, ಬೆಳಗಾಂವ ಅವರು ''ನಾ ಅರಿತಂತೆ ಲಿಂಗಾಯತ ಧರ್ಮ'' ಈ ಕುರಿತು ಮಾತನಾಡಿ ಜಗತ್ತಿನಲ್ಲಿಯೆ ಅತ್ಯಂತ ವೈಶಿಷ್ಟ್ಯಪೂರ್ಣ ಧರ್ಮ ಲಿಂಗಾಯತ

ಧರ್ಮ. ಇದಕ್ಕೆ ಸರಿಸಾಟಿಯಾದ ಧರ್ಮವು ಜಗತ್ತಿನಲ್ಲಿ ಬೇರೊಂದು ಇಲ್ಲ ಎಂದರು. ಬೆಂಗಳೂರಿನ ಗಣ ನಾಯಕಿ ಶರಣೆ. ದೇವಿಕಾ ಶರಣಪ್ಪನವರು ತಮ್ಮ ಉಪನ್ಯಾಸದ ಮೂಲಕ 12 ನೆಯ ಶತಮಾನದಲ್ಲಿ ಶ್ರೀ ಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ಪುನರುತ್ಥಾನ ಮಾಡಿರುವ ಮಹಾಚೇತನಗಳೆಂದರೆ ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಹಾಗೂ ಪರಮ ಪೂಜ್ಯ ಮಾತಾಜಿಯವರು. ಪ್ರವಚನಗಳ ಮೂಲಕ ಪೂಜ್ಯದ್ವಯರು ಬಸವ ಯುಗವನ್ನೇ ಸೃಷ್ಟಿಸಿದ್ದಾರೆ ಎಂದು ಪೂಜ್ಯರುಗಳ ಬಹುಮುಖಿ ವ್ಯಕ್ತಿತ್ವವನ್ನು ಪರಿಚಯ ಮಾಡಿಸಿದರು. ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಶಂಕರಪ್ಪ ಮಹಾಂತಗೋಳ್ ಅಧ್ಯಕ್ಷತೆ ವಹಿಸಿದ್ದರು. ಬಸವ ಧರ್ಮ ಪೀಠದ ಬಸವ ಕಲ್ಯಾಣದ ಪೂಜ್ಯ ಚನ್ನಬಸವರಾಜ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ ಗುರು ಬಸವಣ್ಣನವರು ಜಗತ್ತಿಗೆ ಹೊಸದೊಂದು ಯೋಗ ಕೊಟ್ಟರು ಅದೇ ಇಷ್ಟಲಿಂಗ ಯೋಗ. ಸೊಲ್ಲಾಪುರದ ಸಿದ್ಧರಾಮೇಶ್ವರರು ಅದನ್ನು ಬಸವ ಯೋಗವೆಂದೇ ಕರೆದಿದ್ದಾರೆ ಎಂದರು. ಪ್ರತಿಭಾ ಗರಗ ಕಾರ್ಯಕ್ರಮ ನಿರ್ವಹಿಸಿದರು.

ಜಗತ್ತಿನಲ್ಲಿ ಶಾಂತಿ ನೆಲೆಗೊಳಿಸಲು ವಚನಗಳೆಡೆಗೆ ಸಾಗಿ

- ಡಿ.ಪಿ. ಪ್ರಕಾಶ್

ಸಹಸ್ರಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ನರಳುತ್ತಿರುವ ಇಂದಿನ ಜಗತ್ತಿನಲ್ಲಿ ಶಾಂತಿ, ಸೌಹಾರ್ದತೆ ಮತ್ತು ವಿಶ್ವಭ್ರಾತೃತ್ವವನ್ನು ನೆಲೆಗೊಳಿಸಬೇಕಾದರೆ ಬ್ಯಾಕ್ ಟು ವಚನಾಸ್ ಎಂದು ಹೇಳದೆ ವಿಧಿಯಿಲ್ಲ. ಬಸವಾದಿ ಶರಣರು ಕೊಟ್ಟ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವ ಹಾಗೂ ಅಳವಡಿಸಿಕೊಳ್ಳುವ ಪ್ರಕ್ರಿಯೆ ವಿಶ್ವಮಟ್ಟದಲ್ಲಿ ನಡೆಯಬೇಕಿದೆ. ಇಂತಹ ಮಹಾ ಕಾರ್ಯವನ್ನು ಬಸವ ಧರ್ಮ ಪೀಠದ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಕೈಗೆತ್ತಿಗೊಂಡು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಬೆಂಗಳೂರಿನ ಜೈನ ವೃತ್ತಿಪರ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶರಣ. ಡಿ.ಪಿ. ಪ್ರಕಾಶ್ ನುಡಿದರು.

ಅವರು ದಿ. 12 ರಂದು 16 ನೆಯ ಶರಣ ಮೇಳದ ಗಣಗೋಷ್ಠಿಯಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿ ''ಬಸವಣ್ಣನವರು ಕಟ್ಟಬಯಸಿದ ಜೀವಂತ ಸಮಾಜ'' ಈ ಕುರಿತು ಉಪನ್ಯಾಸ ನೀಡುತ್ತ, ಮಹಾಮಾನವತಾವಾದಿ ಬಸವಣ್ಣನವರು ಕಟ್ಟಿದ ಸಮಾಜ ಪರಿಶುದ್ಧ ಹಾಗೂ ಜೀವಂತವಾಗಿತ್ತು. ತದನಂತರದಲ್ಲಿ ಪಟ್ಟಭದ್ರ ಶಕ್ತಿಗಳು ಜೀವಂತ ಸಮಾಜವನ್ನು ನಿಷ್ಕ್ರಿಯಗೊಳಿಸಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರಲ್ಲದೆ, ಕಲ್ಯಾಣವೇ ಪ್ರಣತೆಯಾಗಿ, ಭಕ್ತಿರಸವೇ ತೈಲವಾಯಿತು. ಸದಾಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ದೈವೀ ಶಕ್ತಿಯು ತೊಳಗಿ ಬೆಳಗಿತು. ಇಂದಿನ ವೈಜ್ಞಾನಿಕ ಭಾಷೆಯಲ್ಲಿ ಹೇಳುವುದಾದರೆ ಬಸವಣ್ಣನೆಂಬ ಫ್ಯೂಸ್ ಹಾಕಿದ ತಕ್ಷಣವೇ ಜಗತ್ತಿಗೆ ಹೊಸ ಬೆಳಕು ಬಂದಿತು. ಜಾನಪದರು ಹೇಳುವಂತೆ ಮೇದಿನಿಗೆ ಬಂತು ಹೊಸಬೆಳಕು; ಆ ಬೆಳಕಿನಲ್ಲಿ ಅಸಂಖ್ಯಾತರು ತಮ್ಮ ಬಾಳಿನ ಹಣತೆಗಳನ್ನು ಬೆಳಗಿಸಿಕೊಂಡರು ಎಂದು ಶರಣ. ಡಿ.ಪಿ. ಪ್ರಕಾಶ್ ತುಂಬ ಮಾರ್ಮಿಕವಾಗಿ ಮಾತನಾಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ವಿಷಯ ಪ್ರಸ್ತಾಪಿಸಿ, ಜಗತ್ತಿನ ಪ್ರಪ್ರಥಮ ಜಗದ್ಗುರು ಪೂಜ್ಯ ಜಗದ್ಗುರು ಅಲ್ಲಮ ಪ್ರಭುದೇವರು ಹೇಳಿರುವಂತೆ 1001 ನೆಯ ಇಸವಿಯಿಂದ 2001 ನೆಯ ಇಸವಿಯವರೆಗಿನ ಸಹಸ್ರಮಾನದ ಯುಗಪುರುಷ ವಿಶ್ವಗುರು ಬಸವಣ್ಣನವರು ಎಂದು ವಿವರಿಸಿದರು. ಗುರು ಬಸವಣ್ಣನವರು ಕೊಟ್ಟಿರುವ

ಇಷ್ಟಲಿಂಗವು ಜಾತಿಯ ಕುರುಹಾಗಿರದೆ ಮಾನವ ಮಾನವರ ನಡುವಿನ ಭೇದವನ್ನು ತೊಡೆಯುವ ಜ್ಯೋತಿಯ ಕುರುಹಾಗಿದೆ ಎಂದರಲ್ಲದೆ, ಸಂಸ್ಕಾರ, ಸಂಘಟನೆ, ಸಹೋದರತ್ವ ಮತ್ತು ಸಹಬಾಳ್ವೆ - ಇವು ಧರ್ಮದ ಪ್ರಮುಖ ಉದ್ದೇಶ ಎಂದು ಪೂಜ್ಯ ಮಾತಾಜಿ ತಿಳಿಸಿದರು.

ಬೆಳಗಾಂವಿಯ ಸಹಾಯಕ ಚಾರಿಟಿ ಕಮೀಷನರ್ ಆದ ಶರಣ. ಕೆ.ಎಸ್. ಬೀಳಗಿಯವರು ಉದ್ಘಾಟಿಸಿ ಮಾತನಾಡಿ, ಜೀವಂತ ಸಮಾಜವನ್ನು ಕಟ್ಟಬೇಕಾದರೆ ತನ್ನಂತೆ ಪರರು ಎಂಬ ಭಾವನೆ ಬೆಳೆಯಬೇಕು. ನಮ್ಮ ತಪ್ಪುಗಳನ್ನು ನಾವು ತಿದ್ದಿಕೊಂಡು ನಡೆಯಬೇಕು. ನಡೆ-ನುಡಿ ಒಂದಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾಜಿ ಸಚಿವ ಎಂ.ಎಸ್. ಪಾಟೀಲರು ಮಾತನಾಡಿ, ಗುರು ಬಸವಣ್ಣನವರು ದೊಡ್ಡ ಸಂದೇಶ ಕೊಟ್ಟಿದ್ದಾರೆ. ಅವರ ಅನುಗ್ರಹವನ್ನು ಪಡೆದು ಕೊಳ್ಳಬೇಕಾದರೆ ಅವರು ಕೊಟ್ಟಿರುವ ಸಾಧನಾ ಮಾರ್ಗದಲ್ಲಿ ನಡೆದಾಗ ಮಾತ್ರ ಸಾಧ್ಯ ಎಂದರಲ್ಲದೆ, ಬಸವ ತತ್ತ್ವವನ್ನು ಅಧಿಕೃತವಾಗಿ ಅಂದರೆ ಖಚಿತವಾಗಿ ತಿಳಿಯಬೇಕಾದರೆ ಅದು ಶರಣ ಮೇಳಕ್ಕೆ ಬಂದಾಗ ಮಾತ್ರ ಸಾಧ್ಯವಿದೆ ಎಂದು ಹೇಳಿದರು.

ಬೆಳಗಾವಿಯ ನ್ಯಾಯಾಧೀಶರುಗಳಾದ ಶ್ರೀ ಜಿ. ನರಹರಿ, ವಿ.ಎಂ. ಆರಾಧ್ಯ ಮತ್ತು ಆರ್.ಎಫ್. ದೊಡ್ಡವಾಡ ಅವರುಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶರಣೆ. ಚಂದ್ರಮ್ಮ ಧಾರವಾಡ ಕಾರ್ಯಕ್ರಮ ನಿರ್ವಹಿಸಿದರು.

ಬಸವ ಕ್ರಾಂತಿ ದಿನ ಲಿಂಗಾಯತರಿಗೆ ಪವಿತ್ರ ದಿನ

ಜನವರಿ 14 ಇದು ಲಿಂಗಾಯತರಿಗೆ ಅತ್ಯಂತ ಪವಿತ್ರವಾದ ದಿನ, ಕಾರಣ ಧರ್ಮಪಿತ ಬಸವಣ್ಣನವರು 12 ವರ್ಷಗಳ ಕಾಲ ಅಖಂಡ ತಪಸ್ಸು ಹಾಗೂ ವಿದ್ಯಾಭ್ಯಾಸ ಮಾಡಿ ನಿರಾಕಾರ, ನಿರ್ಗುಣ, ನಿರಂಜನ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡಂಥ ದಿನ. ಅಷ್ಟೇ ಅಲ್ಲದೆ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಕೊಟ್ಟಂಥ ದಿನ ಇದಾಗಿದೆ. ಬಸವ ಕ್ರಾಂತಿಯ ದಿನದಂದು ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಪ್ರತಿ ವರ್ಷವೂ ನಡೆಯುವ ಶರಣ ಮೇಳದಲ್ಲಿ ತಪ್ಪದೆ ಭಾಗಿಗಳಾಗಬೇಕೆಂದು ಬಸವ ಧರ್ಮ ಪೀಠಾಧ್ಯಕ್ಷರಾದ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವ ಭಕ್ತರಿಗೆ ಕರೆ ಕೊಟ್ಟರು.

ಅವರು ಇಂದು 16 ನೆಯ ಶರಣ ಮೇಳದ ಬಸವ ಧರ್ಮ ಸಂಸ್ಥಾಪನಾ ದಿನದ ಸಂದೇಶ ನೀಡುತ್ತ, ಲಿಂಗಾಯತ ಧರ್ಮದ ಸಂಸ್ಥಾಪಕರು ವಿಶ್ವಗುರು ಬಸವಣ್ಣನವರು. ಇಷ್ಟಲಿಂಗವನ್ನು ಕಂಡು ಹಿಡಿದ ಮಹಾನ್ ವಿಜ್ಞಾನಿ ಗುರು ಬಸವಣ್ಣನವರು. ಪಂಚ ಪೀಠಾಧೀಶರಿಗೂ ಲಿಂಗಾಯತ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ. ಲಿಂಗಾಯತ ಧರ್ಮವನ್ನು ಹಾಳು ಮಾಡುವ ದುರುದ್ದೇಶದಿಂದಲೇ ಪಂಚ ಆಚಾರ್ಯರ ಕಲ್ಪನೆ ಮಾಡಿ ಕಾಲ್ಪನಿಕ ಕಥೆಗಳನ್ನು ಕಟ್ಟಿದ್ದಾರೆ ಎಂದು ಪೂಜ್ಯ ಮಾತಾಜಿಯವರು ಹೇಳಿದರು.

ಗುರು ಬಸವಣ್ಣನವರು ಕೊಟ್ಟಿರುವ ಲಿಂಗಾಯತ ಧರ್ಮವು ಅತ್ಯಂತ ಸರಳ ಹಾಗೂ ವೈಶಿಷ್ಟ್ಯಪೂರ್ಣವಾಗಿದೆ. ದೇವನು ನಾದ ಪ್ರಿಯನೂ ಅಲ್ಲ, ವೇದ ಪ್ರಿಯನೂ ಅಲ್ಲ ಭಕ್ತಿ ಪ್ರಿಯನಾಗಿದ್ದಾನೆ ಎಂದು ಲಿಂಗಾಯತ ಧರ್ಮ ಸಾರಿದೆ. ಧರ್ಮಗುರು ಬಸವಣ್ಣನವರು ಲೋಕದ ಪ್ರತಿಯೊಬ್ಬ ಮಾನವನಿಗೂ ಅನುಕೂಲವಾಗುವಂಥ ಧರ್ಮ ಕೊಟ್ಟಿದ್ದು ಕುರಿ ಬೇಡ, ಮರಿ ಬೇಡ, ಬರಿ ಪತ್ರೆಯ ತಂದು ಪೂಜಿಸು ಲಿಂಗದೇವನ ಎಂದು ಅವರು ಧಾರ್ಮಿಕ ಸ್ವಾತಂತ್ರ್ಯತೆಯನ್ನು ಉದಾರೀಕರಣಗೊಳಿಸಿದ್ದಾರೆ ಎಂದು ಪೂಜ್ಯ ಮಾತಾಜಿ ವಿವರಿಸಿದರು.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಮೊದಲಿಗೆ ಗುರು ಬಸವಣ್ಣನವರ ಪೂಜೆಯನ್ನು ವಿಶೇಷವಾಗಿ ಬಸವ ಧರ್ಮ ಪೀಠದ ಷಡ್‌ಗಣಾಧೀಶರು ಹಾಗೂ ಗಣನಾಯಕ - ನಾಯಕಿಯರಿಂದ ನೆರವೇರಿಸಲಾಯಿತು. ಬಸವ ಧ್ವಜಾರೋಹಣವನ್ನು ಬಸವ ಕಲ್ಯಾಣದ ಶೂನ್ಯ ಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರು ನಡೆಸಿಕೊಟ್ಟರು. ಬಿಜನಳ್ಳಿಯಿಂದ ಆಗಮಿಸಿದ ಹುತಾತ್ಮ ಶರಣ ದಂಪತಿಗಳಾದ ಹರಳಯ್ಯ ಮತ್ತು ಕಲ್ಯಾಣಮ್ಮನವರ ಜ್ಯೋತಿಗಳನ್ನು ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರು ಸ್ವಾಗತಿಸಿದರು.

ಗಣಧ್ವಜಾರೋಹಣದ ನಂತರ ಶರಣ ಲೋಕದಲ್ಲಿ ಸಾಮೂಹಿಕವಾಗಿ ಗಣಲಿಂಗ ದರ್ಶನ ಮತ್ತು ಪ್ರವಚನ ಪಿತಾಮಹ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಶರಣಾಲಯ ದರ್ಶನ ಮಾಡಲಾಯಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಅಕ್ಕಮಹಾದೇವಿ ಅನುಭಾವ ಪೀಠ ಧಾರವಾಡ, ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ವಚನ ಪಠಣ ಮಾಡಿಸಿದರು.

ಪೂಜ್ಯ ಶ್ರೀ ದಯಾನಂದ ಸ್ವಾಮೀಜಿ, ಪೂಜ್ಯ ಶ್ರೀ ಸಿದ್ದೇಶ್ವರಾನಂದ ಸ್ವಾಮೀಜಿ ಚಟ್ನಳ್ಳಿ, ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು ಬಸವಾ ಪಟ್ಟಣ ಅವರು ಸಮ್ಮುಖ ವಹಿಸಿದ್ದರು.

ಮಾಜಿ ಸಚಿವರಾದ ಭಾಲ್ಕಿಯ ಶರಣ. ಸುಭಾಷ ಅಷ್ಟೂರೆ ಮತ್ತು ಅಮೆರಿಕಾದ ಡಾ॥ ಸಿ. ವೀರಪ್ಪನವರು ಮತ್ತು ಸುರೇಂದ್ರ ಕೂಬೀಹಾಳ ವಿಶೇಷ ಆಹ್ವಾನಿತರಾಗಿದ್ದರು.

ಸಮುದಾಯ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಲಕ್ಷಾಂತರ ಶರಣ ಶರಣೆಯರು ಪರಸ್ಪರ ಕುಸುರೆಳ್ಳು ವಿನಿಮಯ ಮಾಡಿಕೊಂಡು ಬಸವ ಕ್ರಾಂತಿಯ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ನಾಲ್ಕು ಲಕ್ಷಕ್ಕೂ ಅಧಿಕ ಶರಣ ಶರಣೆಯರನ್ನು ಈ ವರ್ಷದ ಶರಣ ಮೇಳ ಆಕರ್ಷಿಸಿದೆ.

ಬಸವ ಧರ್ಮ ಪೀಠಾರೋಹಣ - ಪೂಜ್ಯ ಮಾತಾಜಿ ಸಂದೇಶ

ಬಸವ ಧರ್ಮದ ಪರಮೋಚ್ಚ ಪೀಠದ 12ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಅಪಾರ ಶರಣ ಸ್ತೋಮದ ಹರ್ಷೋದ್ಗಾರದ ನಡುವೆ ಪೀಠಾರೋಹಣ ಮಾಡಿದ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ನೀಡಿದ ಸಂದೇಶದ ಮುಖ್ಯ ವಿವರ ಹೀಗಿದೆ:

''ಇಂದು ಬಸವ ಧರ್ಮಪೀಠದ 12ನೇ ವಾರ್ಷಿಕೋತ್ಸವ. ನೀವೆಲ್ಲ ಇಂದು ಇದನ್ನು ಬಹಳ ಸಂಭ್ರಮದಿಂದ ಆಚರಿಸುತ್ತಿದ್ದೀರಿ. ನೀವು ಬಹಳ ಗೌರವ ಅಭಿಮಾನವನ್ನು ವ್ಯಕ್ತಪಡಿಸುತ್ತಿದ್ದೀರಿ. ನೀವು ನೀಡುತ್ತಿರುವ ಈ ಗೌರವ ನನ್ನಲ್ಲಿ ಇರುವ ಬಸವಣ್ಣನವರಿಗೆ ವಿನಾ ನನಗಲ್ಲ. ನನಗೆ ಎಂದು ತಿಳಿದರೆ ಅದು ಅಹಂಕಾರವಾಗುತ್ತದೆ. ಗುರು ಬಸವಣ್ಣನವರು ನನ್ನಿಂದ ಅನೇಕ ಕಾರ್ಯ ಮಾಡಿಸುತ್ತಿದ್ದಾರೆ.'' ಎಂದು ನಂಬಿ ನಾನು ಶ್ರದ್ಧೆ ನಿಷ್ಠೆಯಿಂದ ದುಡಿಯುತ್ತೇನೆ.

ಪರಮಾತ್ಮನು ಪ್ರತಿಯೊಬ್ಬರಿಗೂ ಅದ್ಭುತವಾದ ಮನಸ್ಸನ್ನು ಕೊಟ್ಟಿದ್ದಾನೆ. ಮನಸ್ಸು ಟಿ.ವಿ.ಗಿಂತ ಮಿಗಿಲಾಗಿ, ವೈರ್‌ಲೆಸ್‌ಗಿಂತ ಮಿಗಿಲಾಗಿ ಕೆಲಸ ಮಾಡುತ್ತದೆ. ಅಂತಹ ಮನಸ್ಸನ್ನು ನಾವು ಶುದ್ಧಮಾಡಿಕೊಳ್ಳಬೇಕು. ಯಾವಾಗಲೂ ಪರಮಾತ್ಮನಲ್ಲಿ ನಂಬಿಕೆ, ನಿಷ್ಠೆ, ಶ್ರದ್ಧೆ, ಭಕ್ತಿಗಳಿಂದ ಮನಸ್ಸನ್ನು ಶೃಂಗರಿಸಿ ಅರ್ಪಿಸಿಕೊಂಡರೆ ಆಗ ನಿಮ್ಮಲ್ಲೂ ಸಹ ಸ್ಫುರಣಗಳು, ಪರಮಾತ್ಮನ ಸಂದೇಶಗಳು ಬರುತ್ತಲಿರುವವು. ಆದ್ದರಿಂದ ಶರಣಾಗತಿಯ ಭಾವವನ್ನು ಅಳವಡಿಸಿಕೊಂಡಾಗ ದೈವೀ ಶಕ್ತಿಯನ್ನು

ನಾವು ಪಡೆದುಕೊಳ್ಳಬಹುದು. ಉದಾಹರಣೆಗೆ ಲಿಂಗದೇವಾಷ್ಟಕವನ್ನು 10 ನಿಮಿಷದಲ್ಲಿ ಬರೆದೆ. ಹೇಗೆ ಸಾಧ್ಯವಾಯಿತು? ಇದು ಪೂರ್ಣವಾಗಿ ದೈವೀ ಪ್ರೇರಣೆ. ದೈವೀ ಪ್ರೇರಣೆಯಲ್ಲಿ ಅದ್ಭುತವಾದ ಶಕ್ತಿ ಇದೆ. ಅದನ್ನು ಎಲ್ಲರೂ ಪಡೆಯಬೇಕು.

ಮಹಿಳಾ ಜಗದ್ಗುರು ಪೀಠ ಮಾಡಬೇಕು ಎಂಬುದು, ನನ್ನ ಮನದಲ್ಲಿ ಮೊದಲು ಬಂದಿರಲಿಲ್ಲ. ಆದರೆ ಬಸವ ಕಲ್ಯಾಣದ ಒಂದು ಕಾರ್ಯಕ್ರಮದಲ್ಲಿ ಮಾತನಾಡುವಾಗ ಅಲ್ಲಿ ವಿಚಾರ ಸ್ಫುರಿಸಿತು. ಅದು ಬಂದುದು ದೈವೀ ಪ್ರೇರಣೆ. ದೈವೀ ಸಂಕಲ್ಪದಿಂದ ಒಳಗೇ ಸ್ಫುರಣವಾಯಿತು. ಖ್ಯಾತ ತತ್ವಜ್ಞಾನಿ ಎಡ್ಗರ್ ಕೈಸಿ ಒಂದು ಮಾತು ಹೇಳುತ್ತಾನೆ, ಮಹಾಪುರುಷರು ಸತ್ತಾಗ ದೇಹವು ಪಂಚಭೂತಗಳಲ್ಲಿ ವಿಲೀನ ಆಗುತ್ತದೆ, ಆದರೆ ಅವರ ಸಾವಿನೊಡನೆ ಅವರ ಬಯಕೆಗಳು ಆಕಾಂಕ್ಷೆಗಳು ಸಾಯುವುದಿಲ್ಲ, ಅವು ಸೂಕ್ತವಾದ ಕಾಲಕ್ಕಾಗಿ ಕಾಯುತ್ತ ಈ ಸೃಷ್ಟಿಯಲ್ಲಿಯೇ ಇರುತ್ತವೆ. ಹೇಗೆ ರೇಡಿಯೋ ತರಂಗಗಳು ಆಕಾಶದಲ್ಲಿದ್ದು ರೇಡಿಯೋ ಹಾಕಿದಾಗ ಅದರ ಮೂಲಕ ಹೊರಹೊಮ್ಮುವವೋ ಹಾಗೆಯೇ ಬಸವಾದಿ ಶರಣರ ಆಶೋತ್ತರಗಳು ಕಲ್ಯಾಣದ ನೆಲದಲ್ಲಿದ್ದು ನನ್ನ ಮೂಲಕ ಸ್ತ್ರೀ ಸಮಾನತೆಗಾಗಿ ಮಹಿಳಾ ಜಗದ್ಗುರು ಪೀಠ ಮಾಡುವ ಪ್ರೇರಣೆ ನೀಡಿತು. ಈಗಾಗಲೇ ಅದನ್ನು ಕಾರ್ಯರೂಪಕ್ಕೂ ತರಲಾಗಿದೆ.

ಹಾಗೆಯೇ ಶರಣ ಮೇಳವೂ ಸಹ ಶರಣರ ಸಂಕಲ್ಪವೇ ಆಗಿದೆ. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ....... ಇದು ನಾವು ಹೇಳಿದುದಲ್ಲ, ಶರಣರು ಸಂಕಲ್ಪ ಮಾಡಿ ಹೇಳಿದುದು. ಇಂದು ಇದು ಸತ್ಯವಾಗಿದೆ. ಕೃಷ್ಣೆಗೆ ಈ ಭಾಗ ದಕ್ಷಿಣವಾಗುತ್ತದೆ. ಹಾಗೇ ಮತ್ತೊಂದು ಹೇಳುತ್ತಾರೆ.

ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ.

ವೀರ ಮಡಿವಾಳ ಮಾಚಿದೇವರ ಅಮೃತ ನುಡಿಗಳಿವು. ಇವೂ ಕೂಡ ಶರಣರ ಸಂಕಲ್ಪ. ತಾಯಿ ನೀಲಾಂಬಿಕೆಯವರ ಆಶೀರ್ವಾದ ನಮ್ಮ ಮೇಲೆ ಇದೆ. ಅದಕ್ಕೆ ನಮಗೆ ಭಂಡ ಧೈರ್ಯ ಬಂದಿದೆ.

ನಾರಿಯೊಬ್ಬಳು ಬಂದು ಭಾರಿ ಅಬ್ಬರ ಹೊತ್ತು
ಆರೂಢ ಭಿಕ್ಷೆಯ ಬೇಡ್ಯಾಳು.....

ಧನ ಕನಕಗಳಿಗಿಂತ ಮಿಗಿಲಾದದ್ದು ನಿಮ್ಮ ನಿಷ್ಠೆ ಶ್ರದ್ಧೆ ; ಇದೇ ಆರೂಢ ಭಿಕ್ಷೆ. ಈ ಮೂಲಕವೇ ನಮ್ಮ ನಿಮ್ಮಿಂದ ಈಗ ಶರಣ ಮೇಳದಂಥ ಅದ್ಭುತ ಕಾರ್ಯಕ್ರಮಗಳು ನಡೆಯುತ್ತಲಿವೆ.

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನಾ ಮುದ್ರೆ ಮೆರೆದಾವು, ಧರೆಯವಗೆ
ವಶವಾಗದಿಹುದೇ ಸರ್ವಜ್ಞ ?

ಬಸವ ಧರ್ಮ ಪೀಠವೂ ಸಹ ಶರಣರ ಸತ್‌ಸಂಕಲ್ಪವೇ ಆಗಿದೆ. ಈ ಎಲ್ಲ ಸಂಕಲ್ಪವನ್ನು ಅವರು ಬಿತ್ತಿ ಹೋಗಿದ್ದಾರೆ. ಶಿವಯೋಗಿ ಸಿದ್ಧರಾಮೇಶ್ವರರು ಹೇಳುತ್ತಾರೆ, ಹಿಂದಕ್ಕೆ ಹತ್ತು ಮುಂದೆ ಹನ್ನೊಂದು ಬಾಯಿಲೆಕ್ಕವನಿಟ್ಟ ; ಶರಣರು ಬರುವುದು ಗಟ್ಟ ... ಮುಂದೆ

ವಚನ ಸಾಹಿತ್ಯವು 800 ವರ್ಷಗಳ ಕಾಲದ ಅಜ್ಞಾತವಾಸದ ನಂತರ ಬೆಳಕಿಗೆ ಬಂದುದು ಶರಣ.ಫ.ಗು.ಹಳಕಟ್ಟಿಯವರಿಂದ 1929 ನೆಯ ಇಸವಿಯಲ್ಲಿ. ಪೂಜ್ಯ ಅಪ್ಪಾಜಿ ಜ್ಞಾನ ಸಂಸ್ಕಾರ

ಪಡೆದುದು 1956 ರಲ್ಲಿ. ಹಿಂದೆ ಹತ್ತು ಮುಂದೆ ಹನ್ನೊಂದು. ನಾವು ದೀಕ್ಷೆ ಪಡೆದುದು 1965 ರಲ್ಲಿ. ಅಷ್ಟೇ ಅಲ್ಲ ಬಸವ ಧರ್ಮ ಪೀಠ ಪ್ರಾರಂಭವಾಗಿದ್ದು 1992 ರಲ್ಲಿ. ಅಂದಾಗ ಶರಣರ ಸಂಕಲ್ಪ ಎಷ್ಟು ಸತ್ಯ!

ಬಸವ ಧರ್ಮ ಪೀಠದ ಉದ್ದೇಶ ಬಂಗಾರದ ಕಿರೀಟ ಹಾಕಿ ಪಲ್ಲಕ್ಕಿ ಉತ್ಸವ ಮಾಡುವುದಲ್ಲ. ಬಸವಣ್ಣನವರ ಹೆಸರಿನಲ್ಲಿ ಪೀಠ ಮಾಡದೇ ಕೇವಲ ಕರ್ತಗದ್ದುಗೆಗಳ ಹೆಸರಿನಲ್ಲಿ ಪೀಠಗಳನ್ನು ಮಾಡಿ ಬಸವಣ್ಣನವರನ್ನು ಮರೆಸಿ ತಮ್ಮನ್ನು ತಾವು ಮೆರೆಸಿಕೊಳ್ಳುತ್ತಿದ್ದುದನ್ನು ನೋಡಿಯೇ ಬಸವಣ್ಣನವರ ಹೆಸರಿನಲ್ಲಿ ಪೀಠ ಮಾಡುವ ವಿಚಾರ ಸ್ಫುರಿಸಿತು. ಬಸವ ಧರ್ಮ ಪೀಠ ಟಿ.ವಿ. ಮತ್ತು ರೇಡಿಯೋ ಸ್ಟೇಷನ್‌ಗಳಲ್ಲಿರುವ ರಿಲೇ ಟವರ್ ಇದ್ದಂತೆ. 12 ನೆಯ ಶತಮಾನದಲ್ಲಿ ಬಸವಾದಿ ಪ್ರಮಥರು ನೀಡಿದ ಅಮೃತ ತತ್ವಗಳನ್ನು ರಿಲೇ ಮಾಡುವ ಸ್ಟೇಷನ್ ಇದು.

ಉಜ್ಜಯಿನಿಯ ಮಹಾರಾಜ ವಿಕ್ರಮಾದಿತ್ಯ ಒಬ್ಬ ಆದರ್ಶ ರಾಜ. ನ್ಯಾಯ ನಿಷ್ಠುರಿ. ಬಹಳ ಚೆನ್ನಾಗಿ ರಾಜ್ಯವನ್ನು ಆಳಿ ಕೀರ್ತಿ ಪಡೆದವನು. ಅವರ ನಂತರದ ಕಾಲದಲ್ಲಿ ಒಂದು ಘಟನೆ ಬರುತ್ತದೆ. ಓರ್ವ ಬಾಲಕ ಒಂದು ಮಣ್ಣಿನ ಗುಡ್ಡದ ಮೇಲೆ ಹೋಗಿ ತೀರ್ಪು ಕೊಡುತ್ತಿದ್ದ. ಇದು ಎಲ್ಲರಿಗೂ ಆಶ್ಚರ್ಯ ತರುತ್ತಿತ್ತು. ಏನು ವಿಶೇಷ ಎಂದು ನೋಡಿದಾಗ ಮಣ್ಣಿನ ಕೆಳಗೆ ವಿಕ್ರಮಾದಿತ್ಯನ ಪೀಠವಿತ್ತು. ಅದೇ ರೀತಿ ಬಸವ ಧರ್ಮ ಪೀಠವೂ ಸಹ. ಮನುಕುಲ ಹಿತಕ್ಕಾಗಿ ನ್ಯಾಯ, ನೀತಿ, ಸತ್ಯಗಳನ್ನು ಸಾರಲಿಕ್ಕಾಗಿ ಆಗಿರುವ ಪೀಠವಿದು. ಗುರು ಬಸವಣ್ಣನವರು ಕಟ್ಟಿದ ಅನುಭವ ಮಂಟಪದ ಮೂಲಕ ಶ್ರೇಷ್ಠ ಧರ್ಮ ಹುಟ್ಟಿತು. 15ನೇ ಶತಮಾನದಲ್ಲಿ ಕಲುಷಿತಗೊಂಡಿತು. ಶೈವದ ಅಜ್ಞಾತವಾಸದ ವೇಷ ಹೊತ್ತು ಮತ್ತೆ ವಿಕೃತ ರೂಪ ಪಡೆಯಿತು. ಶರಣ. ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯವನ್ನು ಹೊರತೆಗೆದದ್ದೇ ಬಹುದೊಡ್ಡ ಸಾಹಸ. ವಕೀಲಿ ವೃತ್ತಿಗಾಗಿ ಹಳ್ಳಿ ಹಳ್ಳಿಗಳಿಗೆ ಹೋಗುವಾಗ ಅವರ ಕಣ್ಣಿಗೆ ಬಿದ್ದ ವಚನ ಸಾಹಿತ್ಯವನ್ನು ಬಹಳ ಕಷ್ಟ ಪಟ್ಟು ಸಂಗ್ರಹಿಸಿದರು.

ಇಂದು ನಮ್ಮ ದೇಶಕ್ಕೆ ಮಾರ್ಗವನ್ನು ತೋರುವಂತಹ ಮಾರ್ಗದರ್ಶಿ ಧರ್ಮ ಬೇಕೇ ಬೇಕು. ಕ್ರೈಸ್ತ, ಇಸ್ಲಾಂ ಧರ್ಮಗಳು ಬಹಳವಾಗಿ ಬೆಳೆಯುತ್ತಲಿವೆ. ಅವುಗಳನ್ನು ವಿರೋಧ ಮಾಡಿ ಎಂದು ನಾವು ಹೇಳಲು ಬರುವುದಿಲ್ಲ. ಏಕೆಂದರೆ ಹೇಗೆ ಅನ್ನ, ನಿದ್ರೆ ಇವು ಅವಶ್ಯಕವೋ ಹಾಗೇ ಒಂದು ಧರ್ಮವೂ ಸಹ ಅವಶ್ಯಕ. ತಾಯಂದಿರು ಮಕ್ಕಳಿಗೆ ಊಟಕೊಟ್ಟು ಶಾಲೆಗೆ ಕಳಸದಿದ್ದಾಗ ಅವು ಬೇರೆ ಮಕ್ಕಳಿಂದ ಬೇಡಿ ತಿನ್ನುತ್ತವೆ, ಅಥವಾ ಆ ಕಡೆಗೇ ನೋಡುತ್ತಿರುತ್ತವೆ. ಮುಸ್ಲಿಂ, ಕ್ರೈಸ್ತರಿಗೆ ನೀವು ಊಟ (ಧರ್ಮ ಸಂಸ್ಕಾರವೆಂಬ) ಕೊಡಬೇಡಿ ಎಂದು ಹೇಳಲಿಕ್ಕೂ ಬರುವುದಿಲ್ಲ ಅಥವಾ ನೀವು ಅವರಲ್ಲಿ ಊಟ ಮಾಡಬೇಡಿ ಎಂದೂ ಹೇಳಲು ಬರುವುದಿಲ್ಲ, ಬದಲಾಗಿ ಅವರಂತೆಯೇ ನಾವೂ ಸಹ ಧರ್ಮ ಸಂಸ್ಕಾರವೆಂಬ ಊಟವನ್ನು ಕೊಡುತ್ತೇವೆ ಎಂದಾಗ ಎಲ್ಲರನ್ನೂ ಇಂಬಿಟ್ಟು ಕೊಳ್ಳಬಹುದು.

ಗುರು ಬಸವಣ್ಣನವರು ನೊಂದ ವ್ಯಕ್ತಿಯ ನೋವನ್ನು ಅವರ ಮಟ್ಟದಲ್ಲಿ ಅನುಭವಿಸಿ ಅದಕ್ಕೆ ಪರಿಹಾರವನ್ನು ಕಂಡುಹಿಡಿದರು.

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ

"ಅಪ್ಪಾ, ನನ್ನನ್ನು ನೀವು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ?, ನಾನು ನಿಮಗಾಗಿ ಇದ್ದೇನೆ" ಎಂದು ಗುರು ಬಸವಣ್ಣನವರು ಹೇಳುತ್ತಾರೆ. ಇದನ್ನು ಹೇಳಿ ನೀವು ಜನರನ್ನು ಹುರಿದುಂಬಿಸಿರಿ. ವ್ಯಕ್ತಿಯನ್ನು ಕೀಳು, ಕೀಳು ಎಂದು ಅಪಮಾನ ಪಡಿಸುತ್ತಾ ಇದ್ದರೆ ಆಗ ಆತ ತನ್ನ ಮೂಲ ಜಾತಿ/

ಪಂಥವನ್ನು ಬಿಟ್ಟು ಅನ್ಯ ಧರ್ಮಕ್ಕೆ ಹೋಗುತ್ತಾನೆ. ಆದ್ದರಿಂದ ನಾವು ಉಷ್ಪ್ರ ಪಕ್ಷಿಯಂತೆ ಸಮಸ್ಯೆಯನ್ನು ನೋಡಲಾರದೆ ಕಣ್ಣುಮುಚ್ಚಿ ಕುಳಿತರೆ ಪ್ರಯೋಜನವಾಗದು. ನಾವು ದಲಿತರ ಮನವೊಲಿಸಿ ನೀವೂ ನಮ್ಮವರೆಂದು ಧರ್ಮ ಸಂಸ್ಕಾರವನ್ನು ಕೊಟ್ಟು ಇಂಬಿಟ್ಟುಕೊಳ್ಳಬೇಕು.

ಚೆನ್ನಬಸವಣ್ಣನವರ ವಚನ ಯಾವಾಗಲೂ ಎಚ್ಚರಿಸುತ್ತಿರುತ್ತದೆ. ರಾಜಶಾಹಿ, ಪುರೋಹಿತ ಶಾಹಿಗೆ ಸಿಕ್ಕಿದ ನಮ್ಮ ಧರ್ಮ ಮೇಲೆ ಬರಲು ಆಗಲಿಲ್ಲ. ಚೆನ್ನಬಸವಣ್ಣನವರು ನಮ್ಮ ಮೇಲೆ ಬಹಳ ವಿಶ್ವಾಸವಿಟ್ಟದ್ದಾರೆ,

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆಂದೆನಬೇಡ,
ಮುಂದಣ ಫಲದೊಳಗರಸಿಕೊ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆಂದೆನಬೇಡ
ಮುಂದಣ ಬಣ್ಣದೊಳಗರಸಿಕೊ!

ಅವರು ಹೇಳುತ್ತಾರೆ, ಮುಂದೆ ಖಂಡಿತ ಧರ್ಮ ಮುನ್ನಡೆಯುತ್ತದೆ. ಮುಂದೆ ಪ್ರಜಾಪ್ರಭುತ್ವ ಬರುತ್ತದೆ. ಆಗ ನಮ್ಮವರು ಮುನ್ನಡೆಸುತ್ತಾರೆ ! ಹೀಗೆ ನಮ್ಮೆಲ್ಲರ ಮೇಲೆ ಅವರು ಬಹಳ ವಿಶ್ವಾಸವಿಟ್ಟದ್ದಾರೆ. ವಚನ ಸಾಹಿತ್ಯ ಕಾಸಿ ಕರಗಿಸಿದ ಬಂಗಾರದಂತೆ. ಇದು ಕಾಸಿ ಕರಗಿಸಿದ ಸಾಹಿತ್ಯ. ಇದರಿಂದ ಎಂತಹ ಸುಂದರ ಆಭರಣಗಳು ಬೇಕೋ ಅದನ್ನು ಮುಂದಿನವರು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ನಂತರ ಮಲೆಯ ಮಹದೇಶ್ವರರು, ತೋಂಟದ ಸಿದ್ಧಲಿಂಗೇಶ್ವರರು, ಷಣ್ಮುಖ ಸ್ವಾಮಿಗಳು, ಗುರು ಮಲ್ಲೇಶ್ವರರು ಅಲ್ಲಲ್ಲೇ ಬಂದು ಪುನಃ ಶರಣ ಧರ್ಮವನ್ನು ಉತ್ಥಾನ ಮಾಡಿದ್ದಾರೆ.

ಆದರೆ ಈಗ ನಾವು ಪೂರ್ಣವಾಗಿ, ಅಲ್ಲಲ್ಲೇ ಅಲ್ಲ, ಪೂರ್ಣವಾಗಿ ಒಂದು ನೆಟ್‌ವರ್ಕ್/ಜಾಲ ಮಾಡಬೇಕು. ರಾಷ್ಟ್ರೀಯ ಬಸವ ದಳಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಬೇಕು. ನೀವು ಎಷ್ಟೇ ಜನರಿದ್ದರೂ ಸರಿ, 10 ಜನ ಸೇರಲಿ ಸಾಕು! ರಾಷ್ಟ್ರೀಯ ಬಸವ ದಳ ಮಾಡಿ, ಶಕ್ತಿ ಮೀರಿ ಧರ್ಮ ಪ್ರಚಾರ ಮಾಡಿರಿ.

ಅಂದು ಶರಣರು ಶೂನ್ಯಪೀಠವನ್ನು ಬಸವ ಕಲ್ಯಾಣದಲ್ಲಿ ಕಟ್ಟಿದರು. ಅದು ಸಮಾಜ ಸಂಘಟನೆ, ಮಾರ್ಗದರ್ಶನ ಮಾಡಬೇಕೆಂದು ಬಯಸಿದರು. ನಂತರ ಅಲ್ಲಿ ಕಲ್ಯಾಣ ಕ್ರಾಂತಿಯಾಯಿತು. ಆನಂತರ 800 ವರ್ಷಗಳ ಕತ್ತಲೆ ಆವರಿಸಿತು. 800 ವರ್ಷ ಆದರೂ ಸಹ ಲಿಂಗಾಯತ ಸಮಾಜ ಎಚ್ಚರವಾಗಲಿಲ್ಲ. ಡೈನೋಸಾರಸ್ ಎಂಬ ಪೆಡಂಭೂತ ಪ್ರಾಣಿಯ ಬಾಲ ತುಂಡು ಮಾಡಿದರೆ ಅದಕ್ಕೆ 5 ನಿಮಿಷ ಆದ ಮೇಲೆ ಗೊತ್ತಾಗುತ್ತಿತ್ತಂತೆ. ಅದೇ ರೀತಿ ಇಂದು ಲಿಂಗಾಯತ ಧರ್ಮೀಯರ ಬಾಲ ರಾಜಕೀಯವಾಗಿ ಕೊಯ್ದಿದಾರೆ, ಆರ್ಥಿಕವಾಗಿ, ಸಾಮಾಜಿಕವಾಗಿ ಬಾಲಕೊಯ್ದರೂ ಇನ್ನೂ ಎಚ್ಚರಿಕೆ ಆಗಿಲ್ಲ'' ಎಂದು ಮಾತಾಜಿಯವರು ವಿವರಿಸಿದರು.

ಆದ್ದರಿಂದ ನಾವೆಲ್ಲ ಸಂಘಟಿತರಾಗಿ ಧರ್ಮ ರಕ್ಷಣೆಯ ಕಾರ್ಯ ಮಾಡಬೇಕು. ರಾಷ್ಟ್ರೀಯ ಬಸವ ದಳದವರು ಹೆಚ್ಚು ಹೆಚ್ಚು ನಿಷ್ಠಾವಂತರಾಗಿ ಕಾರ್ಯಗೈಯಬೇಕು. ಮುಂದೆ ಏಪ್ರಿಲ್ 30, ಮೇ 1 ಮತ್ತು 2 ರಂದು ಬಸವ ಕಲ್ಯಾಣಕ್ಕೆ ಹೆಚ್ಚು ಹೆಚ್ಚು ಜನರನ್ನು ಕರೆತರುತ್ತೀರೆಂದು ನಂಬಿ, ಹಾರೈಸುವೆ.

– ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ

ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ
2003 ರ ಏಪ್ರಿಲ್ 18 ರಿಂದ ಮೇ 2 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. (ಬ.ವ.ದೀ. 68)

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2002 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲದ ಮೇಲೆ ನಡೆಸಲಾಯಿತು. ತರಬೇತಿ ಕಮ್ಮಟವು ಅತ್ಯಂತ ಯಶಸ್ವಿಯಾಯಿತು. ಇದರಿಂದ ಪ್ರೇರಣೆಗೊಂಡ ಶರಣ ಬಂಧುಗಳು ಈ ವರ್ಷದ ಬೇಸಿಗೆ ರಜೆಯಲ್ಲೂ ಶಿಬಿರ ನಡೆಸಲು ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ.
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಶರಣ. ವೀರಣ್ಣ ಕೊರ್ಲ್ಪಳ್ಳಿ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 18-4-2003 ರಿಂದ 2-5-2003 ರವರೆಗೆ 15 ದಿವಸಗಳ ಕಾಲ ನಡೆಯುವ ಶಿಬಿರ ಮತ್ತು ಕಲ್ಯಾಣ ಪರ್ವ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

ಪರವಾನಗಿಯೊಡನೆ ಉಚಿತ ಅವಕಾಶ : ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ರಾಷ್ಟ್ರೀಯ ಬಸವ ದಳದವರು ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಏಪ್ರಿಲ್ 17 ರ ಸಂಜೆಯೊಳಗೆ ಅಥವಾ 18 ನೇ ತಾರೀಖು 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ - ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.
3. ಕಲ್ಯಾಣ ಪರ್ವದ ಪೂರ್ವಭಾವಿ ಸಿದ್ಧತೆಯ ಸೇವಾ ಕಾರ್ಯದಲ್ಲಿ ತೊಡಗುವ ಭೃತ್ಯಾಚಾರಿಗಳು(ಸ್ವಯಂ ಸೇವಕರು) ಬೆಳಿಗ್ಗೆ ಮತ್ತು ರಾತ್ರಿ ಯೋಗಾಸನ, ಪೂಜೆ, ಪ್ರವಚನಗಳಲ್ಲಿ ಭಾಗವಹಿಸಿ ಉಳಿದ ಸಮಯದಲ್ಲಿ ಸೇವಾಕಾರ್ಯ ಮಾಡುವುದರಿಂದ ಅವರಿಗೆ ತರಬೇತಿ ಕಮ್ಮಟದಲ್ಲಿ ಉಚಿತ ಪ್ರವೇಶವಿದೆ. ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಲು ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸೂಚನೆ. ಪ್ರಾಥಮಿಕ ಶಾಲಾ ಹಂತದಿಂದ ಯಾವುದೇ ವಯಸ್ಸಿನ ವಿದ್ಯಾರ್ಥಿಗಳು ತರಬೇತಿ ಕಮ್ಮಟದ ಸದುಪಯೋಗ ಮಾಡಿಕೊಳ್ಳಬಹುದು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ


ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಕೂಡಲ ಸಂಗಮದಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಅದೇ ರೀತಿ ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ-ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್-ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.


ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-3325335/3322790


ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 0848-651921/652856




ವಚನ ಪಠಣಕ್ಕೆ ಪೂರ್ವದಲ್ಲಿ ಬಸವ ಧ್ವಜಾರೋಹಣ
ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳಿಂದ



ವಚನ ಪಠಣ ಸಪ್ತಾಹ ಪ್ರಾರಂಭ ದಿ. 9-1-2002




ದಿ. 12-1-2003 ಶರಣ ಮೇಳ ಉದ್ಘಾಟನೆ ಡಾ|| ಸಿ. ವೀರಪ್ಪನವರಿಂದ




ಉದ್ಘಾಟನಾ ಭಾಷಣ ಡಾ|| ಸಿ. ವೀರಪ್ಪನವರಿಂದ



ಚಾರಿಟಿ ಕಮೀಷನರ್ ವಿಜಯ.ಬಿ.ಸಿರಿಯಣ್ಣನವರ ಅವರಿಂದ ಧ್ವನಿಸುರುಳಿ ಬಿಡುಗಡೆ




ನ್ಯಾಯಾಧೀಶ ಎಸ್.ಎಸ್. ನಾಗರಾಳೆ ಅವರಿಂದ ದೀಪೋಜ್ವಲನ




ಡಿ.ಪಿ. ಪ್ರಕಾಶ್ ಅವರಿಂದ ಮಾತೃ ಹರಕೆ ಪುಸ್ತಕ ಬಿಡುಗಡೆ




ಪುಸ್ತಕ ಬಿಡುಗಡೆಯ ನಂತರ ಉಪನ್ಯಾಸ




ಚಾರಿಟಿ ಕಮೀಷನರ್ ವಿಜಯ.ಬಿ.ಸಿರಿಯಣ್ಣನವರಿಗೆ
ಸತ್ಕಾರ ಮತ್ತು ನೆನಪಿನ ಕಾಣಿಕೆಯ ಕೊಡುಗೆ




ಬಸವ ಧರ್ಮ ಪೀಠದ ದಾನಿಗಳಾದ ಡಾ॥ ಆರ್.ಎನ್. ಪಾಟೀಲರಿಗೆ
ಸತ್ಕಾರ ಮತ್ತು ನೆನಪಿನ ಕಾಣಿಕೆಯ ಕೊಡುಗೆ.




ಪೂಜ್ಯ ಚನ್ನಬಸವರಾಡ ಸ್ವಾಮಿಗಳಿಂದ ಚಿಂತನಗೋಷ್ಠಿಯ ಉದ್ಘಾಟನೆ



ಮಾಜಿ ಸಚಿವ ಎಂ.ಎಸ್. ಪಾಟೀಲರಿಗೆ ಸತ್ಕಾರ



ವೇದಿಕೆಯನ್ನು ಅಲಂಕರಿಸಿರುವ ಗಣ್ಯರು



ವೇದಿಕೆ ಅಲಂಕರಿಸಿರುವ ಗಣ್ಯರು ಮತ್ತು ಗಣ ನಾಯಕಿಯರು




ಅಸಿಸ್ಟೆಂಟ್ ಚಾರಿಟಿ ಕಮೀಷನರ್ ಶರಣ.ಕೆ.ಎಸ್.ಬೀಳಗಿ ಅವರಿಂದ
ಚಿಂತನಗೋಷ್ಠಿಯ ಉದ್ಘಾಟನೆ



ಶರಣ. ಕೆ.ಎಸ್. ಬೀಳಗಿ ಅವರಿಗೆ ಸತ್ಕಾರ




ಪೀಠಾರೋಹಣಕ್ಕೆ ಆಗಮಿಸುತ್ತಿರುವ ಮಹಾಜಗದ್ಗುರುಗಳನ್ನು
ಸ್ವಾಗತಿಸಲು ನಿಂತಿರುವ ಪೂಜ್ಯರುಗಳು




ಪಥ ಸಂಚಲನದಲ್ಲಿ ಸಾಗಿರುವ ಪೂಜ್ಯರು




ಪೀಠಾರೋಹಣೋತ್ಸವ ಉದ್ಘಾಟನೆ ದಿ. 13-1-2003




ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೀದರಿನ
ಪಾಂಡುರಂಗ ಸೂರ್ಯವಂಶಿಯವರಿಂದ ಭಾಷಣ




ಪೀಠದ ಮೇಲೆ ಆದಿ ಗುರು ಬಸವಣ್ಣನವರಿಗೆ ಪ್ರಥಮ ಪೂಜೆ




ಲಿಂಗಾಯತ ಧರ್ಮದ ಪವಿತ್ರ ಚಿಹ್ನೆಗೆ ಪೀಠಾರೋಹಣ ಮಾಡಿಸುವ ಮೂಲಕ
ಲಿಂಗಾಯತ ಧರ್ಮಕ್ಕೆ ಪಟ್ಟಗಟ್ಟುವಿಕೆ




ಪ್ರಥಮ ಪೀಠಾಧೀಶರಾದ ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು
ಲಿಂಗಾನಂದ ಅಪ್ಪಾಜಿಯವರಿಗೆ ಗೌರವಾರ್ಪಣೆ




ಪೂಜ್ಯರು, ಶರಣ - ಶರಣೆಯರಿಂದ ಮಾಲಾರ್ಪಣೆ, ಪುಷ್ಪವೃಷ್ಟಿ, ಆರತಿ




ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ಪೀಠಾರೋಹಣ




ಶರಣೆ. ಶ್ರೀಮತಿ ಪರಿಮಳಾ ನಾಗಪ್ಪ ಮತ್ತು ಶರಣೆ. ಡಾ|| ಸುಶೀಲಮ್ಮ
ಅವರಿಂದ ಗೌರವಾರ್ಪಣೆ







ಬಸವ ಧರ್ಮ ಪೀಠದ ಸ್ವಾಮೀಜಿಗಳಿಂದ ಬಾಡದ ಮಲ್ಲಿಗೆಯ ಹಾರದ ಅರ್ಪಣೆ




ಶ್ರೀಮತಿ ಪರಿಮಳಾ ನಾಗಪ್ಪ ಅವರಿಂದ ಪೂಜ್ಯ ಮಾತಾಜಿಯವರಿಗೆ ಮಾಲಾರ್ಪಣೆ



ಶ್ರೀಮತಿ ಪರಿಮಳಾ ನಾಗಪ್ಪ, ಇನ್ನಿತರ ಶರಣ - ಶರಣೆಯರಿಂದ ಆರತಿ




ಪೂಜ್ಯ ಮಾತಾಜಿಯವರಿಂದ ಮಂತ್ರಘೋಷ




ಪೂಜ್ಯ ಮಾತಾಜಿಯವರಿಂದ ಪೀಠಾರೋಹಣ ಸಂದೇಶ




ದಿ. 13-1-2003 ಪೂಜ್ಯ ಮಾತಾಜಿಯವರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ




ಪೂಜ್ಯ ಮಾತಾಜಿಯವರೊಡನೆ ಶರಣೆಯರು
ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ · ನಿರತರಾಗಿದ್ದಾರೆ



ಪೂಜ್ಯ ಸ್ವಾಮಿಗಳವರು ಇಷ್ಟಲಿಂಗಾರ್ಚನೆಯಲ್ಲಿ
ಎಡದಿಂದ ಬಲಕ್ಕೆ- ಪೂಜ್ಯ ಚನ್ನಬಸವಾನಂದ ಸ್ವಾಮಿಗಳು,
ಪೂಜ್ಯ ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಬಸವ ಕುಮಾರ ಸ್ವಾಮಿಗಳು




ಚಿಂತನಗೋಷ್ಠಿಯ ಉದ್ಘಾಟನೆ ಧಾರವಾಡದ ಕೃಷಿ ವಿಶ್ವವಿದ್ಯಾಲಯದ
ಉಪಕುಲಪತಿಗಳಾದ ಡಾ|| ಎಸ್.ಎ. ಪಾಟೀಲರಿಂದ







ದಿನ ನಿತ್ಯ ಸುಪ್ರಭಾತದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆಯ ಪ್ರಾತ್ಯಕ್ಷಿಕೆ ತೋರಿಸುತ್ತಿರುವ
ಪೂಜ್ಯ ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಚನ್ನಬಸವಾನಂದ ಸ್ವಾಮಿಗಳು




ಲಿಂಗೈಕ್ಯ ಶರಣ. ಹೆಚ್.ನಾಗಪ್ಪನವರಿಗೆ ಶ್ರದ್ಧಾಂಜಲಿ



ನಾಗಪ್ಪನವರ ಭಾವಚಿತ್ರಕ್ಕೆ ಪುಷ್ಪವೃಷ್ಟಿ




ಮಾಲಾರ್ಪಣೆ- ಶ್ರೀಮತಿ ಪರಿಮಳಾ ನಾಗಪ್ಪ ಮತ್ತು ಕುಟುಂಬ ಪರಿವಾರದಿಂದ




ಪೂಜ್ಯ ಮಾತಾಜಿಯವರಿಂದ ಮತ್ತು ಸಮಾರಂಭದ ಗಣ್ಯರಿಂದ ಪುಷ್ಪವೃಷ್ಟಿ


ಕಲ್ಯಾಣ ಕಿರಣ-ಫೆಬ್ರವರಿ 2003




ಚಿಂತನಗೋಷ್ಠಿಯ ಉದ್ಘಾಟನೆ ಶರಣ. ಗಂಗಶೆಟ್ಟ ಪಾಟೀಲರಿಂದ



ಸಮಾರೋಪ ಸಮಾರಂಭದ ಉದ್ಘಾಟನೆ ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಸುಭಾಷ್ ಪಾಟೀಲರಿಂದ




ಸಮುದಾಯ ಪ್ರಾರ್ಥನೆಗೆ ಮೊದಲು
(ದಿ. 14-1-2003) ಬಸವ ಧ್ವಜಾರೋಹಣ



ಧ್ವಜಾರೋಹಣದಲ್ಲಿ ಭಾಗಿಗಳಾಗಿರುವ ಶರಣರ ಸಮೂಹ



ಪೂಜ್ಯ ಮಾತಾ ದ್ವಯರಿಂದ ಪಥ ಸಂಚಲನ




ಪೂಜ್ಯ ಲಿಂಗೈಕ್ಯ ಲಿಂಗಾನಂದ ಅಪ್ಪಾಜಿಯವರಿಗೆ ಮಾಲಾರ್ಪಣೆ




ಗುರುಬಸವ ದರ್ಶನ, ಪೂಜೆ




ಗುರುಲಿಂಗ ದರ್ಶನ, ಸ್ಪರ್ಶನ, ಪೂಜೆ




ಗಣಲಿಂಗ ದರ್ಶನ



ಗುರುಬಸವ ದರ್ಶನ



ಬಸವ ಧ್ಯಾನ ಮಂಟಪದಲ್ಲಿ ಬಸವ ಮೂರ್ತಿ




ಮಾತಾದ್ವಯರಿಂದ ಬಸವಾರ್ಚನೆ




ಸಮುದಾಯ ಪ್ರಾರ್ಥನೆಗೆ ಮೊದಲು ಧ್ವಜಾರೋಹಣದಲ್ಲಿ ಶರಣೆಯರ ಸಮೂಹ




ಶರಣರ ಸಮೂಹ



ಬಸವೈಕ್ಯ ಮಂಟಪದಲ್ಲಿ ಪೂಜೆ



ಬಸವೈಕ್ಯ ಮಂಟಪದಿಂದ ಪಥ ಸಂಚಲನ




ಚರಣರಿಂದ ಪಥ ಸಂಚಲನ




ಮೆರವಣಿಗೆಯಲ್ಲಿ ಬಸವಮೂರ್ತಿ




ಪಥ ಸಂಚಲನ




ಪಥ ಸಂಚಲನ - ಮೆರವಣಿಗೆ



ಬಸವ ವೃತ್ತದಲ್ಲಿ ನೆನಹು



ಪಥ ಸಂಚಲನದಲ್ಲಿ ಬಸವ ವೃತ್ತಕ್ಕೆ ಬಂದಾಗ ನೆನಹು ಕಾರ್ಯಕ್ರಮ



ಬಸವ ವೃತ್ತದಲ್ಲಿ ನೆನಹು




ನೆನಹು ಮಾಡುತ್ತಿರುವ ಶರಣ ಸಮೂಹ



ಮೆರವಣಿಗೆ - ಪಥ ಸಂಚಲನದಲ್ಲಿ ಬ್ಯಾಂಡ್ ಬಾರಿಸುತ್ತಿರುವ
ಸುಮಂಗಲಿ ಸೇವಾಶ್ರಮದ ಮಕ್ಕಳು




ಪಥ ಸಂಚಲನ - ಮೆರವಣಿಗೆ




1,96,000 (ಒಂದು ಲಕ್ಷ ತೊಂಭತ್ತಾರು ಸಾವಿರ) ರೂಗಳನ್ನು ಬಸವ ಕಲ್ಯಾಣದ ಅಭಿವೃದ್ಧಿಗೆ
ಸಲ್ಲಿಸಿದ ಕಾಟೇರಿಯ ಶರಣ. ಗುರುಬಸಪ್ಪ ಮತ್ತು ಶರಣೆ. ಪುಷ್ಪಾ ಅವರಿಂದ ಪಾದ ಪೂಜೆ



ಶರಣ. ಗುರುಬಸಪ್ಪ ಕಾಟೀರಿ ಇವರಿಗೆ ಸತ್ಕಾರ



ಶರಣೆ. ಪುಷ್ಪಾ ಗುರುಬಸಪ್ಪ, ಕಾಟೇರಿ ಅವರಿಗೆ ಸತ್ಕಾರ




81,000 (ಎಂಭತ್ತೊಂದು ಸಾವಿರ) ರೂಗಳನ್ನು ಕೊಟ್ಟ ದಾನಿಗಳಾದ ಚಿತ್ರದುರ್ಗದ ಶರಣೆ. ಶಾರದಮ್ಮ ಮತ್ತು ಶರಣ. ಚನ್ನಪ್ಪ ಅವರಿಗೆ ಸತ್ಕಾರ




"ರತ್ನ ಸಿಕ್ಕಿತಮ್ಮ" - ಹಾಡಿನ ನೃತ್ಯ. ಕುಮಾರಿಯರಾದ ಪೂಜಾ, ಬಸವ ಚಂದ್ರಿಕೆ ಮತ್ತು ಆರತಿ ಅವರಿಂದ




ಧಾರವಾಡದ ಕುಮಾರಿ. ಮಮತಾ ಮುಮ್ಮಿಗಟ್ಟಿ ಮತ್ತು ಕುಮಾರಿ. ಪ್ರತಿಭಾ ಗರಗದ ಅವರಿಂದ ಬಸವ ಗುರು ಸ್ತುತಿ



ಚಿಂತನಗೋಷ್ಠಿ-3. ಉದ್ಘಾಟನೆ ಶರಣೆ. ಸರೋಜಮ್ಮ ನಾಗರಾಜು, ಮೈಸೂರು ಅವರಿಂದ




ಚಿಂತನಗೋಷ್ಠಿ-2. ಉದ್ಘಾಟನೆ ಶರಣ. ಪಾಂಡುರಂಗ ಸೂರ್ಯವಂಶಿ ಅವರಿಂದ




ಶರಣ ದರ್ಶನ - ವಸ್ತು ಪ್ರದರ್ಶನಾಲಯ




ವಸ್ತು ಪ್ರದರ್ಶನ ವೀಕ್ಷಿಸುತ್ತಿರುವ ಪೂಜ್ಯ ಮಾತಾಜಿ







ಸಮುದಾಯ ಪ್ರಾರ್ಥನೆಯಲ್ಲಿ ನಿರತರಾದ ಬೃಹತ್ ಶರಣ ಸಮುದಾಯ



63 ಅಡಿ ಎತ್ತರದ ಬಸವ ಮೂರ್ತಿ ಪುತ್ಥಳಿಗೆ ದೇಣಿಗೆ ಸಂಗ್ರಹಕ್ಕಾಗಿ ಒಂದು ರೂಪಾಯಿ ಚಿತ್ರ ಬಿಡುಗಡೆ, ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳಿಂದ



2 ರೂಪಾಯಿ ಚಿತ್ರ ಬಿಡುಗಡೆ ಪೂಜ್ಯ ಮಾತಾಜಿಯವರಿಂದ




ಷಡ್‌ಗಣಾಧೀಶರಿಂದ ಷಟಸ್ಥಲ ಜ್ಯೋತಿ ಉದ್ದೀಪನ





ಶರಣ. ಗಂಗಶೆಟ್ಟ ಪಾಟೀಲರಿಂದ ಚಿಂತನಗೋಷ್ಠಿ ಉದ್ಘಾಟನೆ





ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ತಲ್ಲೀನರಾದ
ಶರಣ ಹಾಗೂ ಶರಣೆಯರ ಸಮೂಹ





ಸಾಮೂಹಿಕ ಇಷ್ಟಲಿಂಗಾರ್ಚನಾ ನಿರತ
ಶರಣೆಯರು ಹಾಗೂ ಶರಣರು




ಜಹೀರಾಬಾದ್ ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ
ಸ್ಪರ್ಧಿಸಿರುವ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು




ಉದಗೀರ್‌ನಲ್ಲಿ ಸ್ವಚ್ಛತಾ ಅಭಿಯಾನ
ರಾಷ್ಟ್ರೀಯ ಬಸವ ದಳದ ವತಿಯಿಂದ ಕಸಗುಡಿಸುವಿಕೆ




ಗುಲಬರ್ಗಾ ನಗರದಲ್ಲಿ ದಿ. 23-1-2003 ರಂದು ಪ್ರಾರಂಭವಾದ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವಿಶ್ವಧರ್ಮ ಪ್ರವಚನದ
ಪ್ರಾರಂಭೋತ್ಸವ. ರಾಷ್ಟ್ರೀಯ ಬಸವ ದಳ, ಗುಲಬರ್ಗಾದ ಕಾರ್ಯಾಧ್ಯಕ್ಷರಾದ
ಶರಣ. ಶಂಕರಪ್ಪ ಮಹಾಂತಗೋಳ್ ಅವರಿಂದ ಜ್ಯೋತಿ ಉದ್ದೀಪನ.




ಮುಖ್ಯ ಅತಿಥಿಗಳಾಗಿ ಆಗಮಿಸಿ, ಉಪನ್ಯಾಸ ಮಾಡಿದ
ಮಾಜಿ ಉಪ ಮಹಾಪೌರರಾದ ಶರಣ. ಸಂತೋಷ್ ಪಾಟೀಲ್



ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರಿಂದ
ರುದ್ರಾಕ್ಷಿ ಮುಕುಟ ಧಾರಣೆ



ಪೂಜ್ಯ ಸ್ವಾಮಿಗಳು, ಗಣನಾಯಕ-ನಾಯಕಿಯರಿಂದ
ಪೀಠಾರೋಹಣದ ಬಳಿಕ ಪುಷ್ಪವೃಷ್ಟಿ





ಕಲ್ಯಾಣ ಕಿರಣ CPMG/KA/BGW - 50
R.NO. 19988/70 WPP (W) - 17